ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಪ್ರಕಟಣೆ

SHETTIGARA VAANI

# ಶೆಟ್ಟಿಗಾರ ವಾಣಿ

ಬೆಂಗಳೂರು ನಿವಾಸಿ ಕರಾವಳಿ ಮೂಲದ ಶೆಟ್ಟಿಗಾರ ಸಮಾಜದ ಮುಖವಾಣಿ


ಸಂಪುಟ:1 ಜುಲೈ 2024 ಸಂಚಿಕೆ:1 ಪುಟಗಳು: 14

**ಸಂಪಾದಕ ಮಂಡಳಿ**
ಶ್ರೀ ನಾರಾಯಣ ಶೆಟ್ಟಿಗಾರ್
ಶ್ರೀ ಮಾಧವ ಶೆಟ್ಟಿಗಾರ್, ಯು
ಶ್ರೀ ಪ್ರಕಾಶಚಂದ್ರ ಆತ್ರಾಡಿ
ಶ್ರೀ ಪ್ರಭಾಕರ ಶೆಟ್ಟಿಗಾರ್, ಎಂ
ಶ್ರೀ ಮಾಧವ ಶೆಟ್ಟಿಗಾರ್, ಶೆಟ್ಟಿಗಾಡು
ಶ್ರೀ ಸುಂದರ ಎಸ್ ಶೆಟ್ಟಿಗಾರ್, ಎಕ್ಕಾರ್
ಶ್ರೀ ದೊಂಬಯ್ಯ ಶೆಟ್ಟಿಗಾರ್
ಶ್ರೀಮತಿ ಬಾನುಮತಿ ಡಿ ಶೆಟ್ಟಿಗಾರ್
ಸಿ.ಎ. ವಿಶ್ರಾಂತ್ ಬಿ ಎಲ್
ಶ್ರೀ ಯತೀಶ್ ಎಲ್. ಶೆಟ್ಟಿಗಾರ್
ಶ್ರೀಮತಿ ಉಷಾ ಚೇತನ್

**ವಿನ್ಯಾಸ ಮತ್ತು ತಂತ್ರಜ್ಞಾನ ನೆರವು**
ಶ್ರೀ ಯಶಸ್ವಿ ಜೆ
ಶ್ರೀ ರಾಮಕೃಷ್ಣ ಸಾಲಿಕೇರಿ

ವಿಳಾಸ
ಶೆಟ್ಟಿಗಾರವಾಣಿ, C/o ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ),
ನಂ.8, ಶಾಂತವೇರಿ ಗೋಪಾಲಗೌಡ ನಗರ,
4ನೇ ಅಡ್ಡ ರಸ್ತೆ, ಮೂಡಲಪಾಳ್ಯ, ಬೆಂಗಳೂರು-560072
ಮೊಬೈಲ್: 9535443311
ಇಮೇಲ್: dkpadmashalibng@gmail.com
ವೆಬ್ ಸೈಟ್: www.dkpadmashalibng.in

ಸೂಚನೆ: ಇಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಆಯಾ ಲೇಖಕರ ವೈಯಕ್ತಿಕ ಅಭಿಪ್ರಾಯಗಳು ಮಾತ್ರ; ಪತ್ರಿಕೆಯ ಅಥವಾ ಕೂಟದ ಅಭಿಪ್ರಾಯಗಳಲ್ಲ.



## ಕಾಪಾಡು ಶ್ರೀ ಸತ್ಯನಾರಾಯಣ

ನೈಮಿಷಾರಣ್ಯದಲ್ಲಿ ವಾಸಿಸುತ್ತಿದ್ದ ಋಷಿಮುನಿಗಳು ಮಾನವರ ಹಿತಾರ್ಥವಾಗಿ ಪುರಾಣಗಳನ್ನು ಬಲ್ಲ ಸೂತ ಪುರಾಣಿಕರನ್ನು ಪ್ರಶ್ನಿಸಿದರು: “ಮುನಿವರ್ಯ, ಮಾನವರ ಮನೋಬಯಕೆಗಳು ಅದಾವ ವ್ರತದಿಂದ ಇಲ್ಲವೆ ಅದಾವ ತಪಸ್ಸಿನಿಂದ ಈಡೇರುವುವು?”

ಸೂತ ಪುರಾಣಿಕರು ಉತ್ತರಿಸಿದರು: “ಎಲೈ ಋಷಿಗಳೇ, ಇದೇ ಪ್ರಶ್ನೆಯನ್ನು ಮೊದಲು ನಾರದ ಮಹರ್ಷಿಗಳು ಶ್ರೀಮನ್ನಾರಾಯಣನನ್ನು ಕೇಳಿದರು. ಅದಕ್ಕೆ ಲೋಕರಕ್ಷಕನಾದ ಭಗವಂತನು ನಾರದರಿಗೆ ಕೊಟ್ಟ ಉತ್ತರವನ್ನೇ ನಿಮಗೆ ಹೇಳುವೆನು. ಚಿತ್ತವಿಟ್ಟು ಅವಧರಿಸಿ” ಎಂದು ಹೇಳಿ ಮುಂದುವರಿಸಿದರು.

“ಒಮ್ಮೆ ನಾರದ ಮುನಿಗಳು ಲೋಕಹಿತಾರ್ಥವಾಗಿ ಎಲ್ಲಾ ಲೋಕಗಳನ್ನು ಸಂಚರಿಸುತ್ತಾ ನಮ್ಮ ಈ ಮರ್ತ್ಯಲೋಕಕ್ಕೆ ಬಂದರು. ತಮ್ಮ ತಮ್ಮ ದುಷ್ಕರ್ಮಗಳಿಗೆ ತಕ್ಕಂತೆ ಹಲವಾರು ನೀಚ ಯೋನಿಗಳಲ್ಲಿ ಜನಿಸಿ, ದುಃಖದಿಂದ ಬಳಲುತ್ತಿರುವುದನ್ನು ಅವರು ಕಂಡರು. ಮರ್ತ್ಯ ಲೋಕದ ಜೀವಿಗಳ ಬವಣೆಯನ್ನು ಕಂಡು ನಾರದರ ಹೃದಯ ಕರಗಿತು.

ಕಳವಳಗೊಂಡ ನಾರದ ಮುನಿಗಳು ಜನರ ದುಃಖವನ್ನು ದೂರಗೊಳಿಸುವ ಮಾರ್ಗವನ್ನು ಕುರಿತು ಚಿಂತಿಸುತ್ತಾ, ಶ್ರೀಮನ್ನಾರಾಯಣನೇ ಯೋಗ್ಯ ಪರಿಹಾರ ನೀಡಬಲ್ಲನೆಂದು ನಿಶ್ಚಯಿಸಿ, ವಿಷ್ಣುಲೋಕಕ್ಕೆ ತೆರಳಿದರು.

ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿದ ನಾಲ್ಕು ಕೈಗಳಿಂದಲೂ, ವನಮಾಲೆಯಿಂದಲೂ ಶೋಭಿಸುತ್ತಿದ್ದ ಶ್ವೇತಾಂಗನಾದ ಶ್ರೀಮನ್ನಾರಾಯಣನು ತನ್ನನ್ನೇ ಸ್ತುತಿಸುತ್ತಾ ನಿಂತಿರುವ ನಾರದರನ್ನು ಕಂಡು "ಎಲೈ ಮುನಿಪೋತ್ತಮರೆ, ನೀವು ಯಾವ ಕಾರ್ಯಕ್ಕಾಗಿ ಬಂದಿರುವಿರಿ. ಹೇಳಿದರೆ ನಡೆಸಿಕೊಡುತ್ತೇನೆ" ಎಂದು ಕೇಳಿದ. ಆಗ ನಾರದರು "ದೇವಾಧಿದೇವಾ, ಮೃತ್ಯು ಲೋಕದ ಜನರು ಬಗೆಬಗೆಯಾಗಿ ದುಃಖವನ್ನು ಅನುಭವಿಸುತ್ತಿರುವರು. ಆ ಜನರ ದುಃಖವನ್ನು ಹೋಗಲಾಡಿಸುವುದಕ್ಕಾಗಿ ನೀನು ನಮಗೆ ಸರಿಯಾದ ದಾರಿಯನ್ನು ತೋರಿಸಿಕೊಡಬೇಕು" ಎಂದರು. ನಾರದರ ಪರೋಪಕಾರ ಬುದ್ಧಿಯನ್ನು ತಿಳಿದ ಭಗವಂತನು "ವತ್ಸ ನಾರದ, ಭೂಲೋಕದ ಜನರ ಮೇಲೆ ಅನುಗ್ರಹ ಮಾಡಬೇಕೆಂಬ ನಿನ್ನ ಉದ್ದೇಶವು ಒಳ್ಳೆಯದೇ ಆಗಿದೆ. ಅವರನ್ನು ದುಃಖ ಮುಕ್ತರಾಗುವಂತೆ ಮಾಡುವ ಸುಲಭದ ದಾರಿಯೊಂದನ್ನು ಹೇಳುತ್ತೇನೆ. ಅದೇ ಮಹಾ ಪುಣ್ಯಕರವಾದ ಸತ್ಯನಾರಾಯಣ ವ್ರತವು. ಅದನ್ನು ಒಳ್ಳೆಯ ವಿಧಾನಪೂರ್ವಕವಾಗಿ ಮಾಡುವುದರಿಂದ ಇಹದಲ್ಲಿನ ದುಃಖವೆಲ್ಲಾ ನಾಶವಾಗಿ ಸುಖ ಉಂಟಾಗುವುದು ಮತ್ತು ಮುಂದೆ ಮರಣಾನಂತರ ಮೋಕ್ಷ ಪ್ರಾಪ್ತಿಯಾಗುವುದು" ಎಂದು ಹೇಳಿದನು.



ಭಗವಂತನ ಮಾತುಗಳನ್ನು ಕೇಳಿ ನಾರದ ಮಹರ್ಷಿಗಳು "ದೇವಾ, ಸತ್ಯನಾರಾಯಣ ವ್ರತ ಮಾಡುವ ವಿಧಾನ ಹೇಗೆ? ಈ ವ್ರತವನ್ನು ಯಾವ ಕಾಲದಲ್ಲಿ ಮಾಡಬೇಕು? ಈ ವ್ರತ ಮಾಡುವುದರಿಂದ ಸಿಗುವ ಫಲವೇನು?" ಎಂದು ಕೇಳಿದರು. ಆಗ ಪರಮಾತ್ಮನು "ಸತ್ಯನಾರಾಯಣ ವ್ರತಾಚರಣೆಯಿಂದ ದುಃಖಗಳೆಲ್ಲಾ ನಾಶವಾಗುವುವು. ಧನ ಧಾನ್ಯ ಸಮೃದ್ಧಿಯಾಗುವುದು. ಸೌಭಾಗ್ಯ ಸಂತತಿ ದೊರೆಯುವುದು. ಮಾಡಿದ ಕಾರ್ಯಗಳಲ್ಲಿ ಜಯವು ಪ್ರಾಪ್ತಿಯಾಗುವುದು. ಯಾವ ಕಾಲ, ಯಾವ ದಿನದಲ್ಲಾದರೂ ಶ್ರದ್ಧೆ ಮತ್ತು ಭಕ್ತಿಯಿಂದ ಈ ವ್ರತವನ್ನು ಮಾಡಬಹುದು. ಧರ್ಮ ತತ್ಪರನಾಗಿ ಬ್ರಾಹ್ಮಣರನ್ನು ಕೂಡಿಕೊಂಡು ಸತ್ಯನಾರಾಯಣ ದೇವರನ್ನು ಸಾಯಂಕಾಲದ ಸಮಯಕ್ಕೆ ಪೂಜಿಸಬೇಕು. ಉತ್ತಮವಾದ ಸಪಾತಭಕ್ಷ್ಯ ನೈವೇದ್ಯವನ್ನು ಭಕ್ತಿಯಿಂದ ಕೊಡಬೇಕು. ಭಕ್ಷ್ಯವೆಂದರೆ ಬಾಳೆಹಣ್ಣು, ತುಪ್ಪ, ಹಾಲು, ಗೋದಿರವೆ ಮತ್ತು ಸಕ್ಕರೆಗಳನ್ನು 'ಸಪಾದ' ಎಂದರೆ ಒಂದು ಪ್ರಮಾಣ ಐದು ಮಡಿ ಮಾಡಿ ನಿವೇದಿಸಬೇಕು. ಗೋದಿರವೆ ಸಿಗದಿದ್ದರೆ ಅಕ್ಕಿರವೆ ಮತ್ತು ಸಕ್ಕರೆ ಸಿಗದಿದ್ದರೆ ಬೆಲ್ಲ ಉಪಯೋಗಿಸಬಹುದು. ಪ್ರತಿಯೊಂದು ವಸ್ತುವಿನ ಪ್ರಮಾಣ ಒಂದೂಕಾಲು ಸೇರಿನಷ್ಟು ಇರಬೇಕು ಎಂಬುದು ಪ್ರತೀತಿ. ಬಳಿಕ ತನ್ನ ಆಪ್ತೇಷ್ಟರನ್ನು ಕೂಡಿ ಬ್ರಾಹ್ಮಣರಿಗೆ ಭೋಜನ ನೀಡಿ, ತಾಂಬೂಲ ದಕ್ಷಿಣೆಗಳನ್ನು ಕೊಡಬೇಕು. ಇಂತಹ ವ್ರತವನ್ನು ಆಚರಿಸಿದರೆ, ಮಾನವನ ಮನೋರಥವು ಸಿದ್ಧಿಸುವುದು. ವಿಶೇಷವಾಗಿ ಈ ವ್ರತವು ಕಲಿಯುಗದಲ್ಲಿ ಬಹು ಬೇಗನೆ ಫಲವನ್ನು ಕೊಡುವಂತಹದ್ದಾಗಿದೆ." ಹೀಗೆಂದು ಭಗವಂತನು ನಾರದರಿಗೆ ಹೇಳಿದನು.

ಶ್ರೀಮನ್ನಾರಾಯಣನು ನಾರದರಿಗೆ ಹೇಳಿದರೆಂದು ಸೂತಪುರಾಣಿಕರು ಋಷಿಮುನಿಗಳಿಗೆ ವಿವರಿಸಿದ ಶ್ರೀಸತ್ಯನಾರಾಯಣ ವ್ರತವನ್ನು ಭೂಲೋಕದ ಜನರು ಇಂದಿಗೂ ಆಚರಿಸಿಕೊಂಡು ಬಂದು ಪುನೀತರಾಗುತ್ತಿದ್ದಾರೆ. ಶ್ರೀ ಸತ್ಯನಾರಾಯಣ ಪೂಜೆಯನ್ನು ಸಾಮಾನ್ಯವಾಗಿ ಪ್ರತೀ ತಿಂಗಳ ಹುಣ್ಣಿಮೆಯ ದಿನ ಆಚರಿಸಲಾಗುತ್ತದೆ. ಆದರೆ ಸತ್ಯನಾರಾಯಣ ಪೂಜೆಗೆ ಶ್ರೀಮನ್ನಾರಾಯಣನೇ ತಿಳಿಸಿದಂತೆ ದಿನ, ಕಾಲಗಳ ನಿಬಂಧನೆಯಿಲ್ಲ. ಪುರೋಹಿತರೇ ಬೇಕೆಂಬ ನಿಯಮವೂ ಇಲ್ಲ. ದೇವರನ್ನು ಕೂರಿಸುವ ಸ್ಥಳವನ್ನು (ಕುರ್ಚಿ, ಮೇಜು) ಸ್ವಚ್ಛಗೊಳಿಸಿ, ನಾಲ್ಕೂ ಬದಿಗೆ ಬಾಳೆಗಿಡ ಕಟ್ಟಿ, ಮಾವಿನ ಎಲೆಯ ತೋರಣದಿಂದ ಅಲಂಕರಿಸಿ, ರಂಗೋಲಿ ಹಾಕಿ ಶ್ರೀಮನ್ನಾರಾಯಣನ ಫೋಟೋ ಅಥವಾ ಪ್ರತಿಮೆಯನ್ನು ಪ್ರತಿಷ್ಠಾಪಿಸಬೇಕು. ಒಂದು ಚೆಂಬಿಗೆ ನೀರು ಹಾಕಿ, ಒಡವೆಗಳಿಂದ ಸಿಂಗರಿಸಿ, ಚೆಂಬಿನ ಮೇಲೆ ವೀಳ್ಯದೆಲೆ, ಜುಟ್ಟು ಇರುವ ತೆಂಗಿನಕಾಯಿ ಇಟ್ಟು ಕಳಸ ತಯಾರಿಸಬೇಕು.

ಸತ್ಯನಾರಾಯಣ ಪೂಜೆ ಮಾಡುವ ಮೊದಲು ಗಣಪತಿ ಪೂಜೆ ಮಾಡಬೇಕು. ನಂತರ ನವಗ್ರಹ ಪೂಜೆ ಮಾಡಿ, ಆಮೇಲೆ ಸತ್ಯನಾರಾಯಣ ಪೂಜೆ ಮಾಡಬೇಕು. ಲಕ್ಷ್ಮೀಪೂಜೆ ಮಾಡಬೇಕು. ಅನಂತರ ಶ್ರೀ ಸತ್ಯನಾರಾಯಣ ಕಥಾಶ್ರವಣ ಮಾಡಬೇಕು. ಕೊನೆಯಲ್ಲಿ ದೇವರಿಗೆ ಆರತಿ ಬೆಳಗಿ, ಪ್ರಸಾದವನ್ನು ಅರ್ಪಿಸಿ, ನೆರೆದಿರುವ ಭಕ್ತರಿಗೆ ಪ್ರಸಾದವನ್ನು ಹಂಚಬೇಕು.

ಭಕ್ತೋದ್ಧಾರಕ ಶ್ರೀಮನ್ನಾರಾಯಣನು ಸರ್ವರಿಗೂ ಸನ್ಮಂಗಳವನ್ನು ಉಂಟುಮಾಡಲಿ.



**ನಾರಾಯಣ ಶೆಟ್ಟಿಗಾರ್**
**ವಿಶ್ವಪ್ರಿಯನಗರ, ಬೇಗೂರು**
**ಬೆಂಗಳೂರು**



# ಸಂಪಾದಕ ವಾಣಿ

## ನಾರಾಯಣ ಶೆಟ್ಟಿಗಾರ್

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ), ಬೆಂಗಳೂರು ಇಂದು ಮೂರು ದಶಕಗಳನ್ನು ಮೀರಿ ಬೆಳೆದು ನಿಂತಿದೆ. 05.10.1989ರಂದು ಬೆಂಗಳೂರು ಜಿಲ್ಲಾ ಸಂಘ ಸಂಸ್ಥೆಗಳ ರಿಜಿಸ್ಟ್ರಾರವರ ಕಛೇರಿಯಲ್ಲಿ ನೋಂದಣಿ ಹೊಂದಿದ ನಮ್ಮ ಕೂಟ 34 ವಸಂತಗಳನ್ನು ಕಳೆದು ಈಗ 35ರ ಪ್ರಬುದ್ಧ ಹರೆಯದ ಉತ್ಸಾಹೀ ತಾರುಣ್ಯದ ಪ್ರಭೆಯನ್ನು ಪ್ರಜ್ವಲಿಸುತ್ತಾ ಮುನ್ನಡೆಯುತ್ತಿದೆ.

ನಮ್ಮ ಸಮಾಜದಲ್ಲಿ ಕವಿ ಹೃದಯಗಳಿಗೆ ಕೊರತೆ ಇಲ್ಲ. ಕೆಲವು ಕವಿ ಹೃದಯಗಳು ಸುಪ್ತವಾಗಿ ತಮ್ಮ ಹೃದಯದೊಳಗೇ ಗುಣುಗುಣಿಸುತ್ತಿದ್ದರೆ, ಹಲವು ಕವಿಹೃದಯಗಳು ತಮ್ಮ ಅಸ್ತಿತ್ವವನ್ನು ಬಹಿರಂಗವಾಗಿ ಸಾರಿ ಪ್ರಕಟಗೊಳ್ಳುತ್ತಿವೆ. ಆದರೆ ಸಮಾಜದ ಜನತೆ ಮತ್ತು ಕೂಟದ ಕಡೆಯಿಂದ ಸಾಹಿತ್ಯಾಸಕ್ತರ ಬೆಳವಣಿಗೆಗೆ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆ ಸಿಗುತ್ತಿಲ್ಲ ಎಂಬ ಅಸಮಾಧಾನದ ಧೂಮ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದೆ. ಇಂತಹ ಅನಿಸಿಕೆಗಳಿಗೆ ಸೂಕ್ತ ಸ್ಪಂದನೆ ನೀಡಿ, ನವಪ್ರತಿಭೆಗಳಿಗೆ ಸಹಕಾರಿಯಾಗಿ ಕಾರ್ಯತತ್ಪರವಾಗಬೇಕೆಂಬುದು ಕೂಟದ ಅಪೇಕ್ಷೆಯೂ ಹೌದು.

ಸಾಹಿತ್ಯ ಕ್ಷೇತ್ರದ ಪ್ರತಿಭೆಗಳನ್ನು ಗುರುತಿಸಿ, ಅವರಿಗಾಗಿ ಸೂಕ್ತ ವೇದಿಕೆಯನ್ನು ಒದಗಿಸುವ ನಿಟ್ಟಿನಲ್ಲಿ ಈ ಡಿಜಿಟಲ್ ಪತ್ರಿಕೆ ಕೂಟದ ಒಂದು ಅಳಿಲು ಸೇವೆ, ಅಷ್ಟೆ. ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾದವರು ಸಾಹಿತ್ಯ ರಂಗಕರ್ಮಿಗಳು ಮತ್ತು ಸಹೃದಯಿ ಓದುಗರು. ಸಮಾಜದ ಕಟ್ಟಕಡೆಯ ಸದಸ್ಯ ಕುಟುಂಬವೂ ಈ ಅಕ್ಷರ ಯಜ್ಞದಲ್ಲಿ ಭಾಗಿಯಾಗಬೇಕೆನ್ನುವುದು ಕೂಟದ ಸದಾಶಯ. ಇದು ನಮ್ಮೆಲ್ಲರ ಸವಿನಯ ವಿನಂತಿ ಕೂಡಾ. ಮಾಡಿದ ಶ್ರಮಕ್ಕೆ ಯಶಸ್ಸು ದೊರೆಯುವುದು ಅದನ್ನು ಹತ್ತಾರು ಜನರು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಂಡಾಗ. ಇಲ್ಲವಾದರೆ ಮಾಡಿದ ಶ್ರಮಕ್ಕೆ ಬೆಲೆಯಿರುವುದಿಲ್ಲ. ಸಮಾಜ ಬಾಂಧವರು ನಮ್ಮ ಹೊಸ ಪ್ರಯತ್ನದ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕೆನ್ನುವುದು ನಮ್ಮ ಮಹದಾಶಯ.

ನಮ್ಮ ಈ ಚೊಚ್ಚಲ ಸಂಚಿಕೆಯಲ್ಲಿ ಸಮಾಜದ ಹಿರಿಯರ ಆಶೀರ್ವಾದ ಪಡೆಯುವ ನಮ್ಮ ಸದುದ್ದೇಶದ ಕೋರಿಕೆಯನ್ನು ಮನ್ನಿಸಿ ತಮ್ಮ ಲೇಖನಗಳ ಮೂಲಕ ಹರಸಿದ ಹಿರಿಯರನ್ನು ಕೃತಜ್ಞತಾ ಪೂರ್ವಕವಾಗಿ ಅಭಿವಂದಿಸುತ್ತೇವೆ. ಮುಂದಿನ ಸಂಚಿಕೆಗಳನ್ನು ನಮ್ಮ ಯುವಶಕ್ತಿಯೇ ಹೆಚ್ಚು ಉಪಯೋಗಿಸಿಕೊಳ್ಳಬೇಕೆಂದು ನಮ್ಮ ಬಯಕೆಯಾಗಿದೆ.

ತಮ್ಮೆಲ್ಲರ ಸಲಹೆ, ಸಹಕಾರ, ಪ್ರೋತ್ಸಾಹಗಳಿಗೆ ಸದಾ ಸ್ವಾಗತವಿದೆ. ಬೆನ್ನು ತಟ್ಟಿ ಹುರಿದುಂಬಿಸುವ ಪ್ರಶಂಸೆಯ ಅನಿಸಿಕೆಗಳಿಗೂ, ನಿಮ್ಮ ಆರೋಗ್ಯಪೂರ್ಣ ಹಿತನುಡಿಗಳಿಗೂ ನಮ್ಮ ಹೃದಯದ ಬಾಗಿಲು ಸಮಪ್ರಮಾಣದಲ್ಲಿ ತೆರೆದೇ ಇರುತ್ತದೆ.



# ಅಧ್ಯಕ್ಷ ವಾಣಿ

## ಭಾನುಮತಿ ಡಿ ಶೆಟ್ಟಿಗಾರ್

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ (ರಿ) ಬೆಂಗಳೂರು ಒಂದು ಪ್ರಗತಿಪರ ಸೇವಾ ಸಂಸ್ಥೆಯಾಗಿದೆ. ನಮ್ಮ ಕೂಟದ ಸರ್ವ ಚಟುವಟಿಕೆಗಳ ಮಾಹಿತಿಯನ್ನು ಪ್ರತಿಯೊಬ್ಬ ಸದಸ್ಯರಿಗೂ ಸಮಾಜಸ್ಥರಿಗೆ ತಲುಪಿಸುವ ಚಿಂತನೆಯಲ್ಲಿದ್ದಾಗ ನಮಗೆ ಒಂದು ಮುಖವಾಣಿಯ ಅಗತ್ಯತೆಯ ಅರಿವಾಯಿತು. ಅದೇ ಶೆಟ್ಟಿಗಾರವಾಣಿ ಪತ್ರಿಕೆಯನ್ನು ಪ್ರಾರಂಭಿಸಲು ಕಾರಣವಾಯಿತು. ಸಮಾಜ ಬಾಂಧವರ ಪ್ರತಿಭೆಗಳನ್ನು ಅನಾವರಣಗೊಳಿಸುವುದಕ್ಕೂ ಇದು ಒಂದು ಉತ್ತಮ ಮಾಧ್ಯಮವಾಗಲಿದೆ. ಎಲ್ಲರೂ ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಈ ಪತ್ರಿಕೆಯ ಮುದ್ರಣ ಇರುವುದಿಲ್ಲವಾದರೂ ಇದನ್ನು ನಿರ್ದಿಷ್ಟ ರೂಪುರೇಷೆಗೊಳಿಸಿ ಹೊರತರಲು ಶ್ರಮಿಸುತ್ತಿರುವ ಪ್ರತಿಯೊಬ್ಬರಿಗೂ ನಮ್ಮೆಲ್ಲರ ಪ್ರೋತ್ಸಾಹದ ಅಗತ್ಯವಿದೆ. ಇದನ್ನು ಎಲ್ಲಾ ಭಾಗದ ಸಮಾಜಸ್ಥರಿಗೆ ತಲುಪಿಸುವ ಹೊಣೆಗಾರಿಕೆಯನ್ನು ಎಲ್ಲಾ ಸದಸ್ಯರು ನಿರ್ವಹಿಸೋಣ. ಇದೊಂದು ಉತ್ತಮ ವೇದಿಕೆಯಾಗಲಿ ಎಂದು ಬಯಸುತ್ತಾ ಇದರ ಸಂಪಾದಕವರ್ಗ, ತಾಂತ್ರಿಕವರ್ಗ ಬೇರೆ ಬೇರೆ ಅಂಕಣಗಳಿಗೆ ತಮ್ಮ ಲೇಖನವನ್ನು ಒದಗಿಸುತ್ತಿರುವ ಸರ್ವರಿಗೂ ಹೃದಯಸ್ಪರ್ಶಿ ಅಭಿನಂದಿಸುತ್ತಿದ್ದೇನೆ. ಇದನ್ನು ಪ್ರತಿ ಮಾಹೆಗೂ ಪುರಸ್ಕರಿಸಿ ಪ್ರೋತ್ಸಾಹಿಸೋಣ ಎಂದು ಆಶಿಸುತ್ತೇನೆ.

ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟವು 2023-24ನೇ ಸಾಲಿನಲ್ಲಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ. ನಮ್ಮ ಉಪಸಮಿತಿಯಲ್ಲಿ ಒಂದಾದ ಸಾಂಸ್ಕೃತಿಕ ತಂಡದವರು ಆಯೋಜಿಸಿದ **‘ಕ್ಯೂ ಮ್ಯಾಂಗೋ ಟ್ರಿ ರೆಸಾರ್ಟ್ಗೆ’** ಒಂದು ದಿನದ ಪ್ರವಾಸ, ಮಹಿಳಾ ಬಳಗದವರು ಪಾಲ್ಗೊಂಡು ನಡೆಸಿದ **‘ತಾತ್ಪರ್ಯ ಸಹಿತ ಸೌಂದರ್ಯ ಲಹರಿ ಪಠಣ’**, ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಸಮಿತಿಯವರು ಮತ್ತು ತಾಂತ್ರಿಕ ಸಮಿತಿಯವರು ಒಟ್ಟಾಗಿ **‘ಟ್ಯಾಕ್ಸ್ ಪ್ಲಾನಿಂಗ್ ಸೆಶ್ಷನ್’** ಮತ್ತು ಸಾಂಸ್ಕೃತಿಕ ತಂಡದ ನೇತೃತ್ವದಲ್ಲಿ ಎಲ್ಲಾ ಮಹಿಳೆಯರಿಗೂ **ಸ್ವಯಂ ರಕ್ಷಣೆ ತರಬೇತಿ** ನೀಡುವ ಮೂಲಕ ಆಚರಿಸಿದ ಮಹಿಳಾ ದಿನಾಚರಣೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದವರಿಗೂ ಭಾಗವಹಿಸಿದ ಎಲ್ಲಾ ಸಮಾಜಸ್ಥರಿಗೂ ತುಂಬು ಹೃದಯದ ಅಭಿನಂದನೆಗಳು.

ಇನ್ನು ಮುಂದಿನ ದಿನಗಳಲ್ಲಿ ನಾವು ಆಯೋಜಿಸಲು ನಿರ್ಧರಿಸಿರುವ ಕಾರ್ಯಚಟುವಟಿಕೆಗಳ ಪಕ್ಷಿನೋಟ ಇಂತಿವೆ. **ಒಳಾಂಗಣ ಕ್ರೀಡೆ** (Shuttle Badminton & Carrom), **ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ**, **ವಾರ್ಷಿಕ ಕ್ರೀಡಾ ಕೂಟ**. ಇದೇ ರೀತಿಯಾಗಿ ನಾವು ಹತ್ತು ಹಲವು ಕಾರ್ಯಕ್ರಮಗಳನ್ನು ನಮ್ಮ ಕೂಟದ ವಿವಿಧ ಉಪಸಮಿತಿಯವರ ನೇತೃತ್ವದಲ್ಲಿ ಆಯೋಜಿಸುತ್ತಿದ್ದು ಇವೆಲ್ಲದರಲ್ಲೂ ಸರ್ವ ಸದಸ್ಯರು ಎಲ್ಲಾ ಸಮಾಜ ಭಾಂದವರು ಭಾಗವಹಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿಸುತ್ತೇವೆ.

ಕಿರುಗತೆ

# ರಾಜಿನಾಮೆ!

ಐದು ವರ್ಷಗಳ ಹಿಂದೆ ನಾನು ಅಂತಾರಾಷ್ಟ್ರೀಯ ಕಂಪೆನಿಯೊಂದರಲ್ಲಿ ಮಾನವ ಸಂಪನ್ಮೂಲ ಮುಖ್ಯಸ್ಥನಾಗಿ ಸೇವೆಯಲ್ಲಿರುವಾಗ ನಡೆದ ಘಟನೆಯಿದು. ಅಂದು ನಮ್ಮ ಕಂಪೆನಿಯ ಫೈನಾನ್ಸ್ ವಿಭಾಗದ ಉದ್ಯೋಗಿ ಸದಾನಂದ್ ಎಂಬವನ ಬೀಳ್ಕೊಡುಗೆ ಸಮಾರಂಭ ನಡೆಯುತ್ತಿತ್ತು. ಪಾಪ, ಆರು ವರ್ಷಗಳಿಂದ ನಿಯತ್ತಿನಿಂದ ಕೆಲಸ ಮಾಡುತ್ತಿದ್ದ ಸಾಧುಪ್ರಾಣಿ, ಉತ್ತಮ ಉದ್ಯೋಗಿಯಾಗಿದ್ದ ಸದಾನಂದ್ ಒಂದು ತಿಂಗಳ ಹಿಂದೆ ಯಾಕೋ ಬೇಸರಗೊಂಡು ಇದ್ದಕ್ಕಿದಂತೆ ಅವನ ಮ್ಯಾನೇಜರ್ ಕಾರ್ತಿಕ್ ಅವರಿಗೆ ರಾಜಿನಾಮೆ ಪತ್ರವನ್ನು ಸಲ್ಲಿಸಿದ್ದ. ಮುಟ್ಠಾಳ ಸದಾನಂದ ತನ್ನ ಕೈಯಲ್ಲಿ ಇನ್ನೊಂದು ಕೆಲಸವಿಲ್ಲದೇ ರಾಜಿನಾಮೆ ನೀಡಿದ್ದ. ಕಾರಣ ಏನೆಂದು ಕೇಳಿದ್ರೆ ಬಾಯಿ ಬಿಟ್ಟಿರಲಿಲ್ಲ. ನಾನು ಅವನ ಎಕ್ಸಿಟ್-ಇಂಟರ್ವ್ಯೂ ಮಾಡಿದಾಗಲೂ ಅವನು ನಿಜ ಕಾರಣವನ್ನು ಬಾಯಿ ಬಿಟ್ಟಿರಲಿಲ್ಲ. ಅವನಿಗೆ ಕೆಲಸದ ಒತ್ತಡ ಜಾಸ್ತಿಯಿತ್ತು, ಎಂದು ಅವನ ಸಹೋದ್ಯೋಗಿಗಳು



AI generated image: No photo credits required

ಹೇಳಿದ್ದರು. ಆದರೆ ಕಾರ್ತಿಕ್ ಮಾತ್ರ "ರಮೇಶ್, ನಾನು ಸದಾನಂದನ ರಾಜಿನಾಮೆಯನ್ನು ಅಂಗೀಕರಿಸಿದ್ದೇನೆ. ಒಂದು ತಿಂಗಳಲ್ಲಿ ಅವನನ್ನು ರಿಲೀವ್ ಮಾಡಿಬಿಡಿ. ಹಾಗೆಯೇ ದಯಮಾಡಿ ನಂಗೆ ಬೇರೆ ರಿಪ್ಲೇಸ್‌ಮೆಂಟ್ ಕೊಡಿ" ಎಂದು ಸದಾನಂದನ ರಾಜಿನಾಮೆ ಪತ್ರದಲ್ಲಿ ಬರೆದು ನನಗೆ ಕಳುಹಿಸಿದ್ದ. ನಾನು ಮನಸ್ಸಿಲ್ಲದ ಮನಸ್ಸಿನಿಂದ ಅದನ್ನು ಅಂಗೀಕರಿಸಿದ್ದೆ. ಹಾಗಾಗಿ ಇಂದು ನಮ್ಮ ಕಂಪೆನಿಯಲ್ಲಿ ಸದಾನಂದನಿಗೆ ಕೊನೆಯ ದಿನವಾಗಿತ್ತು. ಸಂಜೆ ಪ್ರಾರಂಭವಾದ ಅವನ ಫೇರ್ವೆಲ್ ಸರಳವಾಗಿತ್ತು. ಅವನ ಐದು ಮಂದಿ ಸಹೋದ್ಯೋಗಿಗಳು ಮತ್ತು ಮ್ಯಾನೇಜರ್ ಕಾರ್ತಿಕ್, ಇಷ್ಟು ಜನ ಅವರದ್ದೇ ಡಿಪಾರ್ಟ್ಮೆಂಟಿನಲ್ಲಿ ಬೀಳ್ಕೊಡುಗೆ ಸಮಾರಂಭ ಆಯೋಜಿಸಿದ್ದರು. ಎಚ್. ಆರ್ ಹೆಡ್ ಆದ ಕಾರಣ ನನ್ನನ್ನೂ ಕರೆದಿದ್ದರು. ಫೇರ್ವೆಲ್ ಪಾರ್ಟಿ ಪ್ರಾರಂಭವಾಗಿ ಅವನ ಸಹೋದ್ಯೋಗಿಗಳೆಲ್ಲ ಸದಾನಂದನನ್ನು ಹಾಡಿ ಹೊಗಳಿದ ನಂತ್ರ ಕೊನೆಗೆ ಕಾರ್ತಿಕ್ ಮಾತನಾಡಿದ. ಅವನು ತನ್ನ ಭಾಷಣದ ಮಧ್ಯೆ "ಜಂಟಲ್ಮೆನ್, ಐ ಹ್ಯಾವ್ ಎ ಸರ್ಪ್ರೈಸ್ ನ್ಯೂಸ್ ಫಾರ್ ಯು. ಕಳೆದ ವಾರ ನಾನು ಕೂಡಾ ರಾಜಿನಾಮೆ ಸಲ್ಲಿಸಿದ್ದೇನೆ. ನನಗೆ ಬೇರೆ ಕಂಪೆನಿಯೊಂದರಲ್ಲಿ ಪದನ್ನೋತಿಯೊಂದಿಗೆ ಉದ್ಯೋಗ ದೊರಕಿದೆ. ಹಾಗಾಗಿ ನಾನು ಕೂಡಾ ಇನ್ನೊಂದು ತಿಂಗಳಲ್ಲಿ ನಿಮಗೆ ವಿದಾಯ ಹೇಳಲಿದ್ದೇನೆ. ಈ ವಿಷಯ ಸದ್ಯ ಗೌಪ್ಯವಾಗಿರಲಿ, ಎಂದು ರಮೇಶ್ ನನ್ನಲ್ಲಿ ಮನವಿ ಮಾಡಿದ್ದಾರೆ. ಹಾಗಾಗಿ ನನ್ನ ರಾಜಿನಾಮೆ ವಿಷಯ ಸದ್ಯ ಹೊರಗೆ ಗೊತ್ತಾಗುವುದು ಬೇಡ" ಎಂದ. ಆ ಮಾತನ್ನು ಕೇಳಿದ ಅವರೆಲ್ಲಾ "ಓ...ನೋ!" ಎಂದು ಪರಮಾಶ್ಚರ್ಯದಿಂದ ಉದ್ಗಾರ ತೆಗೆದರು. ಹತ್ತು ವರ್ಷಗಳಿಂದ ಇಲ್ಲೇ ಗಟ್ಟಿಯಾಗಿ ಲಂಗರು ಹಾಕಿದ್ದ ಆ ದರ್ಪದ ಮ್ಯಾನೇಜರ್ ಕಂಪೆನಿ ಬಿಡುವುದೆಂದರೇನು? ಆದರೆ ಕಾರ್ತಿಕ್ ನನ್ನ ಉಪಸ್ಥಿತಿಯಲ್ಲಿ ಅದನ್ನು ಹೇಳಿದ ಕಾರಣ ಎಲ್ಲರೂ ನಂಬಿದರು. ನಾನು ಅವರೆಲ್ಲರ ಪ್ರತಿಕ್ರಿಯೆಗಳನ್ನು ಗಮನಿಸುತ್ತಿದ್ದೆ. ಎಲ್ಲರೂ ಒಳಗೊಳಗೆ ಸಂತೋಷ ಪಡುತ್ತಿರುವಂತೆ ಕಂಡಿತು. ಆದರೆ ಸದಾನಂದ ಮಾತ್ರ ಗಾಢವಾಗಿ ಯೋಚಿಸುತ್ತಿದ್ದ.

ಕಾರ್ತಿಕ್ ಭಾಷಣ ಮುಗಿಸಿ ಸದಾನಂದನಿಗೆ ಫೇರ್ವೆಲ್ ಗಿಫ್ಟ್ ಕೊಡಲು ಮುಂದಾದಾಗ ಆತ ನನ್ನಲ್ಲಿ "ರಮೇಶ್ ಸಾರ್, ನಿಮ್ಮಲ್ಲಿ ಅರ್ಜಂಟಾಗಿ ಮಾತಾಡಬೇಕು, ಕಾನ್ಫಿಡೆನ್ಷಿಯಲ್!" ಎಂದ. ಇದ್ದಕ್ಕಿದ್ದಂತೆ ಸದಾನಂದ ಹಾಗೆ ಬಿನ್ನವಿಸಿದಾಗ ಎಲ್ಲರೂ ಅದೇನಿರಬಹುದೆಂದು ಆಶ್ಚರ್ಯಪಟ್ಟರು. ನಾನು ಅವನನ್ನು ಕರೆದುಕೊಂಡು ನನ್ನ ಕ್ಯಾಬೀನ್‌ಗೆ ಹೋದೆ. ಒಳಗೆ ಬಂದ ತಕ್ಷಣ ಸದಾನಂದ "ಸಾರ್, ಕಾರ್ತಿಕ್ ರಾಜಿನಾಮೆ ನೀಡಿದ್ದು ಸತ್ಯವಾ?" ಎಂದ. ನಾನು ಹೌದೆಂದು ತಲೆಯಾಡಿಸಿದೆ. ಅದಕ್ಕೆ ಆತ "ಓ ಸೂಪರ್! ಹಾಗಾದ್ರೆ ನಾನು ನನ್ನ ರಾಜಿನಾಮೆಯನ್ನು ಹಿಂದೆ ಪಡೆಯಬಹುದೇ?" ಎಂದ. ನನಗೆ ಆಶ್ಚರ್ಯವಾಯಿತು. "ಆರ್ ಯೂ ಶ್ಯೂರ್ ಸದಾನಂದ್?" ನಾನು ಕೇಳಿದೆ. "ನೂರಕ್ಕೆ ನೂರು ಸಾರ್! ನಾನಿಲ್ಲೇ ಕಂಟಿನ್ಯೂ ಮಾಡ್ತೇನೆ!" ಎಂದ. ನಾನೊಮ್ಮೆ ಸದಾನಂದನ ಮುಖವನ್ನೇ ನೋಡಿ ನಕ್ಕು ಅವನ ಫೈಲಿನಲ್ಲಿದ್ದ ರಾಜಿನಾಮೆ ಪತ್ರದಲ್ಲಿ "ರೆಸಿಗ್ನೇಷನ್ ವಿದ್‌ಡ್ರಾನ್" ಎಂದು ಅವನಲ್ಲಿ ಬರೆಯಿಸಿ, ಫೈಲ್‌ನಲ್ಲಿ ಸಿದ್ದವಾಗಿದ್ದ ಅವನ ರಿಲೀವಿಂಗ್ ಲೆಟರ್ ಹರಿದು ಹಾಕಿದೆ. ಪುಣ್ಯಕ್ಕೆ ಸದಾನಂದನ ರಿಪ್ಲೇಸ್‌ಮೆಂಟ್ ವ್ಯಕ್ತಿಗೆ ನಾನಿನ್ನೂ ಆಫರ್ ಲೆಟರ್ ಕಳಿಸಿರಲಿಲ್ಲ. ಸದಾನಂದ ನನಗೆ ಧನ್ಯವಾದ ಅರ್ಪಿಸಿ ಅಲ್ಲಿಂದ ಮತ್ತೆ ತನ್ನ ಡಿಪಾರ್ಟ್ಮೆಂಟಿಗೆ ಉಲ್ಲಾಸದಿಂದ ಓಡಿದ.

ಅಲ್ಲಿ ಕಾರ್ತಿಕ್ ಸದಾನಂದನಿಗೆ ಅವನ 'ವಿದಾಯದ-ಸ್ಮರಣಿಕೆ' ನೀಡಲು ಕಾಯುತ್ತಿದ್ದ. ಆದರೆ ಸದಾನಂದ "ಕ್ಷಮಿಸಿ, ನಾನು ನನ್ನ ರಾಜಿನಾಮೆಯನ್ನು ಹಿಂಪಡೆದಿದ್ದೇನೆ. ನಾನು ಇಲ್ಲೇ ಕಂಟಿನ್ಯೂ ಮಾಡಲು ನಿರ್ಧರಿಸಿದ್ದೇನೆ!" ಎಂದು ಕಾರ್ತಿಕ್‌ನ ಮುಖವನ್ನೇ ನೋಡುತ್ತಾ ಹೇಳಿದ. ಅಲ್ಲಿದ್ದವರೆಲ್ಲ ಸಂಭ್ರಮಿಸುತ್ತಾ ಕಾರ್ತಿಕ್ ಮುಖವನ್ನು ನೋಡಿದರು. ಕಾರ್ತಿಕ್‌ನ ಮುಖ ಸುಟ್ಟ ಬದನೆಯಾಯಿತು. ಕೈಯಲ್ಲಿದ್ದ ಫೇರ್ವೆಲ್ ಗಿಫ್ಟ್ ಅವನನ್ನು ಅಣಕಿಸಿದಂತೆ ಕಂಡಿತು.

*(ಸಮೀಕ್ಷೆಗಳ ಪ್ರಕಾರ ಪ್ರತಿಶತ 60%ನಷ್ಟು ಜನ ಕೆಲಸ ಬಿಡುವುದಕ್ಕೆ ಅವರ ಮ್ಯಾನೇಜರ್ ಕಾರಣರಾಗಿರುತ್ತಾರೆ)*



**ರಮೇಶ್ ಶೆಟ್ಟಿಗಾರ್ ಮಂಜೇಶ್ವರ**
**ವಿಜಯಾ ಎನ್ಕ್ಲೇವ್**
**ಬಿಳೇಕಹಳ್ಳಿ, ಬೆಂಗಳೂರು**

ಸಣ್ಣ ಕಥೆ

# ಪವಿತ್ರ ಸ್ನೇಹ


AI generated image: No photo credits required

"ನಮಸ್ತೆ ಆಂಟಿ, ಹೇಗಿದ್ದೀರಾ? ಏನೋ ಕೆಲಸದಲ್ಲಿ ಇದ್ದೀರಾ" ಎನ್ನುತ್ತಾ ಪವಿತ್ರ ಸುಮಿತ್ರನ ಮನೆಯೊಳಗೆ ಪ್ರವೇಶಿಸಿದಳು.

"ಓ ಪವಿತ್ರ, ಬಾಮ್ಮ ಒಳಗೆ" ಎನ್ನುತ್ತಾ... ಬರಮಾಡಿಕೊಂಡರು ಸುಮಿತ್ರಾ.

"ಕೆಲಸ ಏನು ಇಲ್ಲ. ಸ್ನೇಹನ ರವಿಕೆ ಗುಂಡಿ ಹೋಗಿತ್ತು ಅದನ್ನು ಹಾಕುತ್ತಾ ಕುಳಿತಿದ್ದೇನೆ.

ಅಂದ ಹಾಗೆ ಸ್ನೇಹ ಎಲ್ಲಿ? ಇವತ್ತು ಕಾಲೇಜಿಗೂ ಬಂದಿಲ್ಲ... ಉಷಾರಿಲ್ಲವೇ?"

"ಚೆನ್ನಾಗಿಯೇ ಇದ್ದಾಳೆ ಒಳಗಡೆ ರೂಮಿನಲ್ಲಿ ಇದ್ದಾಳೆ, ಹೋಗು ಅಲ್ಲೇ... ಮಾತನಾಡು."

ಪವಿತ್ರ ತನ್ನ ಪ್ರೀತಿಯ ಗೆಳತಿ ಸ್ನೇಹಳ ರೂಮಿಗೆ ಕಾಲಿಡುತ್ತಾ "ಹೇಗಿದ್ದಿಯಾ? ಕ್ಲಾಸಿಗೆ ಯಾಕೆ ಚಕ್ಕರ್ ಹಾಕಿದ್ದಿ?"

"ನನಗೇನಾಗಿದೆ ಗುಂಡು ಕಲ್ಲಿನ ಹಾಗೆ ಇದ್ದೇನೆ. ಮನಸ್ಸಿನ ನೋವನ್ನು ತೋರುಗೊಡದೆ ನಗು ನಗುತ್ತಾ ಮಾತಿಗಾರಂಭಿಸಿದಳು. ಏನು ಹೇಳಲಿ ಎಲ್ಲರ ಮನೆ ದೋಸೆ ತೂತಾದರೆ ನಮ್ಮ ಮನೆ ಕಾವಲಿಯೇ ತೂತಾಗಿದೆ " .

"ಏನು ಒಗಟಾಗಿ ಮಾತನಾಡುತ್ತಿ? ಬಿಡಿಸಿ ಹೇಳು."

"ನನ್ನ ಹಣೆ ಬರಹಕ್ಕೆ ಏನು ಹೇಳಲಿ? ಈ ವರ್ಷದ ಕಾಲೇಜು ಫೀಸ್ ಕಟ್ಟಿಲ್ಲ, ಫೀಸ್ ಕಟ್ಟಿಲ್ಲಾಂದ್ರೆ ಎಕ್ಸಾಮಿಗೆ ಕೂರಿಸಲ್ಲ ಅಂದ್ರು ಪ್ರಿನ್ಸಿಪಾಲರು. ಏನು ಮಾಡಲು ತೋಚದೆ ಸುಮ್ಮನೆ ಮನೆಯಲ್ಲಿದ್ದೇನೆ. ಅಪ್ಪನ ಹೇಗೆ ಕೇಳಲಿ? ಕೊರೊನಾ ಬಂದು ಕೆಲಸ ಕಳಕೊಂಡು ಕೂಲಿನಾಲಿ ಮಾಡಿಕೊಂಡು ನಮ್ಮನ್ನು ಸಾಕುತ್ತಾರೆ. ಅಮ್ಮನೂ ಕೆಲಸ ಮಾಡುತ್ತಿದ್ದ ಗಾರ್ಮೆಂಟ್ ಫ್ಯಾಕ್ಟ್ರಿ ಮುಚ್ಚಿದೆ. ಇನ್ನೂ ತೆರೆದಿಲ್ಲ. ಊಟಕ್ಕೇನೆ ಪರದಾಡುತ್ತಿದ್ದೇವೆ. ಇಷ್ಟು ದಿನ ದುಡಿದು 'ಸೇವಿಂಗ್' ಮಾಡಿದ ದುಡ್ಡೆಲ್ಲಾ ಖರ್ಚಾಯಿತು. ತಂಗಿ ತಮ್ಮನ ಫೀಸ್ ಕಟ್ಟಬೇಕು. ಮನೆ ಬಾಡಿಗೆ ಕಟ್ಟ ಬೇಕು. ನಮ್ಮದು ಎಪಿಎಲ್ ಕಾರ್ಡ್. ಬಿಪಿಎಲ್ ಕಾರ್ಡ್ ಇದ್ದಿದ್ದರೆ ರೇಷನಾದರು ಪುಕ್ಕಟೆ ಸಿಕ್ಕುತ್ತಿತ್ತು. ನಮ್ಮ ಸರಕಾರದ ಯಾವ ಗ್ಯಾರಂಟಿಗೂ ನಾವು ಅರ್ಹರಲ್ಲ ಅನಿಸುತ್ತಿದೆ. ಯಾವ ದಿಕ್ಕು ದೆಸೆಯಿಲ್ಲದೆ ನಿರ್ಗತಿಕರಾಗಿದ್ದೇವೆ" ಎಂದು ಕಣ್ಣೀರು ಹಾಕಿದಳು ಸ್ನೇಹ.

"ಅಯ್ಯೋ..ಹುಚ್ಚಿ, ನಿನ್ನ ಗೆಳತಿ ನಾನಿರುವಾಗ ನಿನಗೇಕೆ ಅಂಜಿಕೆ? ಯಾಕೆ ನನಗೆ ಒಂದು ಮಾತು ತಿಳಿಸಿಲ್ಲ?"

"ನಮ್ಮ ಕಷ್ಟ ನಮಗಿರಲಿ ದುಡ್ಡಿನ ವಿಷಯದಲ್ಲಿ ಗೆಳೆತನ ಹಾಳು ಮಾಡಲು ನನಗೆ ಇಷ್ಟವಿಲ್ಲ. ಅಪ್ಪ ಹೇಗಾದರೂ ದುಡ್ಡು ಹೊಂದಿಸುವೆ, ಕಾಲೇಜಿಗೆ ಹೋಗು ಅಂದಿದ್ದಾರೆ. ಆದರೆ ಕಾಲೇಜಿನಲ್ಲಿ ಎಲ್ಲರ ಮುಂದೆ ಪ್ರಿನ್ಸಿಪಾಲರು ಹೇಳಿದ್ದರಿಂದ ಮುಜುಗರ ಅನಿಸಿತು. ಫೀಸ್ ಕಟ್ಟಿಯೇ ಹೋಗುವುದು ಎಂದು ನಿರ್ಧರಿಸಿ ಮನೆಯಲ್ಲಿದ್ದೇನೆ."

"ಯಾಕೆ ಅಷ್ಟು ಬೇಜಾರು ಮಾಡುತ್ತಿ? ನನ್ನ ಡ್ಯಾಡಿಗೆ ಹೇಳಿ ಏನಾದರೂ ದುಡ್ಡಿನ ವ್ಯವಸ್ಥೆ ಮಾಡುತ್ತೇನೆ."

"ಬೇಡ ಬೇಡ ಪವಿತ್ರ .. ನೀನು ಇದರಲ್ಲಿ ತಲೆ ಹಾಕಬೇಡ."

"ಇರು ಈಗ ಬರುತ್ತೇನೆ" ಎಂದು ಸ್ನೇಹಳ ಉತ್ತರಕ್ಕೂ ಕಾಯದೆ ಮನೆ ಕಡೆ ಹೊರಟಳು ಪವಿತ್ರ.

ಪವಿತ್ರಳ ತಂದೆ ಡ್ಯೂಟಿಯಿಂದ ಬಂದು ಕಾಫಿ ಹೀರುತ್ತಾ ಟಿವಿ ಮುಂದೆ ಕುಳಿತು ವಾರ್ತೆ ನೋಡುತ್ತಾ ಕುಳಿತಿದ್ದರು. ಮಗಳನ್ನು ನೋಡಿ "ಇಷ್ಟು ಹೊತ್ತು ಎಲ್ಲಿ ಹೋಗಿದ್ದಿ ಮಗಳೇ?" ಎಂದರು.

"ಅದೇ..ನನ್ನ ಗೆಳತಿ ಸ್ನೇಹ ಎರಡು ದಿನದಿಂದ ಕಾಲೇಜಿಗೆ ಬಂದಿಲ್ಲ.. ವಿಚಾರಿಸೋಣಾಂತ ಅವರ ಮನೆಗೆ ಹೋಗಿದ್ದೆ."

"ಯಾಕೆ ಉಷಾರಿಲ್ಲವಾ?"

"ಹಾಗೇನೂ ಇಲ್ಲಪ್ಪ.. ಅದೇ ನಿಮ್ಮಲ್ಲಿ ಒಂದು ವಿಷಯ ಹೇಳೋಣಾಂತ ಕಾತರದಿಂದ ಬಂದೆ."

"ಏನು ಹೇಳು?"

"ಅದೇ ಅವರ ಮನೆ ಪರಿಸ್ಥಿತಿ ಏನೂ ಚೆನ್ನಾಗಿಲ್ಲ. ಫೀಸ್ ಕಟ್ಟಿಲ್ಲಾಂತ ಕಾಲೇಜಿಗೆ ಬಂದಿಲ್ಲ. ಕೊರೊನಾ ಸಮಯದಲ್ಲಿ ಅಪ್ಪ ಅಮ್ಮ ಇಬ್ಬರು ಕೆಲಸ ಕಳ್ಕೊಂಡಿದ್ದರು ಇನ್ನು ಬೇರೆ ಕೆಲಸ ಸಿಕ್ಕಿಲ್ಲ ಹುಡುಕುತ್ತಾನೆ ಇದ್ದಾರಂತೆ. ಅವಳ ಮಾತು ಕೇಳಿ ಬೇಜಾರಾಯಿತು. ಅಪ್ಪಾ..ನಮ್ಮಿಂದ ಅವರಿಗೆ ಏನಾದರೂ ಸಹಾಯ ಮಾಡಲು ಸಾಧ್ಯವೇ?"

"ಅಷ್ಟೇ ತಾನೇ ತಗೊ..ಈ ದುಡ್ಡು ಅವರಿಗೆ ಕೊಟ್ಟು ಫೀಸ್ ಕಟ್ಟಲು ಹೇಳು" ಎಂದು ತನ್ನ ಪರ್ಸ್ನಿಂದ ದುಡ್ಡು ತೆಗೆದು ಕೊಟ್ಟರು. ನಾಳೆಯಿಂದ ಅವರ ಅಪ್ಪನ್ನ ನಮ್ಮ ಫ್ಯಾಕ್ಟ್ರಿಗೆ ಕೆಲಸಕ್ಕೆ ಬರಲು ಹೇಳು" ಎಂದರು ಪವಿತ್ರನ ಅಪ್ಪ ಶಂಕರ.

"ಥಾಂಕ್ಸ್ ಅಪ್ಪ. ನೀವೆಷ್ಟು ಒಳ್ಳೆಯವರು. ಈಗಲೇ ಹೋಗಿ ಅಂಕಲ್ಲನ್ನು ನಿಮ್ಮ ಬಳಿ ಬಂದು ಮಾತನಾಡಲು ಹೇಳುವೆ" ಎಂದು ಮತ್ತೆ ನಿರ್ಮಲ ಮನೆಗೆ ಬಂದು

ಪವಿತ್ರನ ಕೈಗೆ ದುಡ್ಡು ಕೊಟ್ಟಳು.

“ಲೇ..ಏನು ಮಾಡುತ್ತಿಯೇ? ಯಾಕೆ ಈ ದುಡ್ಡು ತಂದಿ? ನನಗೆ ಬೇಡ. ಅಪ್ಪನಿಗೆ ಗೊತ್ತಾದರೆ ನನ್ನ ಮರ್ಯಾದೆ ಹರಾಜು ಹಾಕಿದ್ದಿಯಾ ಎಂದು ಸಿಟ್ಟು ಮಾಡುವರು. ಈ ದುಡ್ಡು ತಗೊಂಡು ಹೋಗಿ ನಿಮ್ಮ ಅಪ್ಪನಿಗೆ ಕೊಡು. ನನ್ನ ಅಪ್ಪ ದುಡ್ಡು ಹೊಂದಿಸುವೆ ಎರಡು ದಿನ ಸಮಯಕೊಡು ಅಂದಿದ್ದಾರೆ.”

“ಇರು ನಾನೇ ನಿಮ್ಮ ಅಪ್ಪನಲ್ಲಿ ಮಾತನಾಡುವೆ” ಎಂದು ಪವಿತ್ರನ ತಂದೆ ಬಳಿ ಬಂದು, “ಅಂಕಲ್ ನಮ್ಮ ಅಪ್ಪನ ಕಂಪೆನಿಯಲ್ಲಿ ಕ್ಲಾರ್ಕ್ ಪೋಸ್ಟ್ ಖಾಲಿ ಇದೆಯಂತೆ, ನಿಮ್ಮ ಬಳಿ ಮಾತಾಡಬೇಕಂತೆ. ಅದಕ್ಕೆ ಬರಲು ಹೇಳಿದರು.”

“ಹೌದೆ..ತುಂಬಾ ಸಂತೋಷ. ನಾನು ಈಗಲೇ ಬರುತ್ತೇನೆ, ನೀನು ಹೋಗು” ಎಂದು ಹೇಳಿ ದೇವರ ಕೋಣೆಗೆ ಹೋಗಿ ನಮಸ್ಕರಿಸಿ “ಅಪ್ಪಾ ಗಣೇಶ ನನ್ನ ಕೈ ಬಿಡಬೇಡ. ನನಗೆ ನೀನೇ ದಾರಿ ತೋರಿಸು” ಎಂದು ನಮಸ್ಕರಿಸಿ ಹೊರಗೆ ಬಂದರು. ಕಾಲಿಗೆ ಚಪ್ಪಲಿ ಹಾಕಿ, ಮಳೆ ಬರುತ್ತಿರುವುದರಿಂದ ಕೈನಲ್ಲಿ ಕೊಡೆ ಹಿಡಿದು ಪವಿತ್ರನ ಮನೆಗೆ ಹೊರಟರು ಬಾಗಿಲ ಬಳಿ ನಿಂತು ಪವಿತ್ರನ ಕೂಗಿ, ತಾನು ಬಂದಿರುವುದಾಗಿ ಹೇಳಿದರು.

“ಬನ್ನಿ ಅಂಕಲ್, ಅಪ್ಪ ನಿಮಗೋಸ್ಕರ ಕಾದಿದ್ದಾರೆ” ಎನ್ನುತ್ತಾ ಮನೆಯೊಳಗೆ ಬರ ಮಾಡಿಕೊಂಡಳು ಪವಿತ್ರ.

ಶಂಕರನ ನೋಡಿ ಪವಿತ್ರನ ಅಪ್ಪ ಕಿಶೋರ್ “ಬನ್ನಿ ಅಣ್ಣ... ನಿಮ್ಮ ಬಗ್ಗೆ ನನ್ನ ಮಗಳು ಹೇಳಿದಳು. ಕೇಳಿ ಬೇಜಾರಾಯಿತು. ಇಲ್ಲಿ ಬಂದಿದ್ದೀರಲ್ಲ, ಇನ್ನು ನಿಮ್ಮ ಕಷ್ಟ ದೂರವಾಯಿತು ಅಂದುಕೊಳ್ಳಿ. ನಾಳೆಯಿಂದ ಡ್ಯೂಟಿಗೆ ಬನ್ನಿ. ಈ ದುಡ್ಡು ತಗೊಳ್ಳಿ. ಮಕ್ಕಳ ಫೀಸ್ ಕಟ್ಟಿ.”

“ಬೇಡ ಸಾರ್, ಕೆಲಸ ಕೊಟ್ಟಿರಲ್ಲ, ಅಷ್ಟು ಸಾಕು. ಸಂಬಳ ಬಂದ ತಕ್ಷಣ ಮುಂದಿನ ತಿಂಗಳು ಕಟ್ಟುತ್ತೇನೆ.”

“ಬೇಡ ಬೇಡ. ಇದು ತಗೊಂಡ್ ಹೋಗಿ. ಮುಂದಿನ ತಿಂಗಳಿನಿಂದ ಸಂಬಳದಲ್ಲಿ ನಾನೇ ತೆಗೆದು ಕೊಳ್ಳುತ್ತೇನೆ.”

“ಅಷ್ಟು ಮಾಡಿ ಪುಣ್ಯಕಟ್ಟಿಕೊಳ್ಳಿ. ನಿಮ್ಮ ಈ ದೊಡ್ಡ ಗುಣವನ್ನು ಹೊಗಳಲು ನನಗೆ ಪದಗಳೇ ಸಿಕ್ಕುತ್ತಿಲ್ಲ.”

“ಶಂಕರ್, ಯಾಕೆ ಅಷ್ಟು ಹೊಗಳುತ್ತೀರಿ? ನನ್ನ ಮಗಳು ಕಾಲೇಜಿಗೆ ಹೋಗದೆ ಸ್ನೇಹಿತರ ಜೊತೆಗೆ ಸುತ್ತಾಡುತ್ತಿದ್ದಾಗ ಅವಳಿಗೆ ಬುದ್ದಿ ಹೇಳಿ ಕೈ ಹಿಡಿದು ಸರಿ ದಾರಿಯಲ್ಲಿ ನಡೆಯುವಂತೆ ಮಾಡಿದ್ದು ನಿಮ್ಮ ಮಗಳು ಸ್ನೇಹ ಅನ್ನುವುದು ನಾವು ಇನ್ನೂ ಮರೆತಿಲ್ಲ. ಕಷ್ಟ ಸುಖಗಳಿಗೆ ಬೆನ್ನೆಲುಬಾಗಿ ನಿಂತು ಸುಖ ದುಃಖಗಳಲ್ಲಿ ಪಾಲು ಪಡೆದವರೇ.. ಈ “ಪವಿತ್ರ ಸ್ನೇಹ.”



ಕಮಲಾಕ್ಷಿ ಶೆಟ್ಟಿಗಾರ್
ರಾಮಗೊಂಡನಹಳ್ಳಿ
ಬೆಂಗಳೂರು




# ಆಚಾರ ವಿಚಾರ

ಆಚಾರ ವಿಚಾರಗಳ ಕಡೆಗೆ ಗಮನ ಹರಿಸುತ್ತಿದ್ದಂತೆ ಮನಸ್ಸಿನಲ್ಲಿ ಏನೇನೋ ವಿಚಾರಗಳು ಹರಿದು ಸಮುದ್ರದ ಅಲೆಗಳು ಅಪ್ಪಳಿಸಿ ಬಂದು ತೀರಕ್ಕೆ ಬಡಿದು ಸದ್ದಿಲ್ಲದೆ ಹಿಂದಿರುಗಿದಂತೆ ಭಾಸವಾಗುತ್ತದೆ. ನಮ್ಮ ಕರಾವಳಿ ಕರ್ನಾಟಕದ ತುಳುನಾಡಿನಾದ್ಯಂತ ವಿವಿಧ ರೀತಿಯ ಆಚರಣಾ ಪದ್ದತಿಗಳಿದ್ದುವು. ಹತ್ತು ಹಲವಾರು ಪದ್ಧತಿಗಳು ಈಗಲೂ ಜೀವಂತವಾಗಿವೆ. ಭೂತಾರಾಧನೆ, ನಾಗಾರಾಧನೆ ಇತ್ಯಾದಿ. ಒಂದೊಂದು ಕಡೆ ಒಂದೊಂದು ರೀತಿಯ ಆಚರಣಾ ಪದ್ದತಿ. ಈ ಬಗ್ಗೆ ಚಿಂತನೆ ಮಾಡಿದಾಗ ಮನಸ್ಸಿನಲ್ಲಿ ಹುಟ್ಟುವ ಕುತೂಹಲ, ಮಗದೊಮ್ಮೆ ಹೀಗೂ ಒಂದು ರೀತಿಯ ಪದ್ಧತಿ ಇತ್ತೇ ಅನ್ನುವ ಆಶ್ಚರ್ಯ. ವಿಷಯದ ಒಳಹೊಕ್ಕಂತೆ ಏನೋ ಒಂದು ರೀತಿಯ ಕುತೂಹಲದ ಕಡೆ ನಮ್ಮ ಮನಸ್ಸು ಓಡಲಾರಂಭಿಸುತ್ತದೆ. ಪ್ರತಿಯೊಂದೂ ಆಚಾರಕ್ಕೂ ಒಂದೊಂದು ಸಂದರ್ಭ ಹಾಗೂ ಅದರದೇ ಆದ ವೈಶಿಷ್ಟ್ಯತೆ ಹಾಗೂ ಅರ್ಥ ಇದ್ದೇ ಇದೆ. ಇವೆಲ್ಲಾ ಗೊಡ್ಡು ಸಂಪ್ರದಾಯ ಹಾಗೂ ಅರ್ಥವಿಲ್ಲದ್ದು ಅನ್ನುವಂತಿಲ್ಲ. ಇದು ಹೀನ ಅನ್ನುವುದೂ ತಪ್ಪು ಅಭಿಪ್ರಾಯ. ಆಳಕ್ಕಿಳಿದು ಅರ್ಥೈಸಿಕೊಂಡಾಗ ಈ ಯೋಚನೆಗಳು ನಾವು ಎಲ್ಲೋ ಸುತ್ತಿ ಮರಳಿ ಬರಲು ದಾರಿ ಮರೆತಂತೆ ಭಾಸವಾಗುತ್ತದೆ.

ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶದ ಅನುಸಾರ ಆಚಾರ ಎನ್ನುವ ಈ ಪದಕ್ಕೆ ನಡತೆ, ಶಿಷ್ಟರೂ ಉತ್ತಮರೂ ಆಚರಿಸುವ ಪದ್ಧತಿ, ಪರಂಪರಾಗತವಾಗಿ ಒದಗಿ ಬಂದ ನಿಯಮಿತ ನಿತ್ಯ ಕರ್ಮಗಳು, ಸಂಪ್ರದಾಯ, ಪದ್ಧತಿ, ವಾಡಿಕೆ, ವಿದ್ಯುಕ್ತ ಕರ್ಮ ಎಂಬೀ ಅರ್ಥಗಳಿವೆ. ಒಬ್ಬ ವ್ಯಕ್ತಿ ನಂಬುವ ತತ್ವ ಸಿದ್ಧಾಂತ, ಮಾತು ಏನೇ ಇರಲಿ. ಅವನ ಆಚರಣೆ, ಅನುಷ್ಠಾನ, ತನ್ನ ನಿತ್ಯ ಜೀವನದಲ್ಲಿ ಅಳವಡಿಸಿ ಇತರ ಕೆಲಸ ಕಾರ್ಯಗಳ ಜೊತೆ ಜೊತೆಗೆ ಇವನ್ನೂ ಜೀವಂತವಾಗಿಡುವುದು ಬಹಳ ಮುಖ್ಯ. ಇಂಥಹ ಆಚರಣೆಯಿಂದಲೇ ಆತ ಧರ್ಮವನ್ನು ರಕ್ಷಿಸಿದಂತೆ ಆಗುವುದು. ಧರ್ಮವನ್ನು ರಕ್ಷಿಸುವವನನ್ನು ಧರ್ಮ ರಕ್ಷಿಸುವುದೆಂದೂ ಹೇಳಲಾಗಿದೆ.



ಮಾಧವ ಶೆಟ್ಟಿಗಾರ್ ಯು
ವಿಜಯನಗರ ಪೈಪ್ ಲೈನ್
ಬೆಂಗಳೂರು






ಯೋಗೀಶ್ ಎಲ್ ಶೆಟ್ಟಿಗಾರ್
ಮಣಿಕೊಂಡ
ಹೈದರಾಬಾದ್

# ವಾಸ್ತವದ ವ್ಯಸನವಿರಲಿ

ನಮಗೆ ವಾಸ್ತವದಲ್ಲಿ ಜೀವನ ನಡೆಸುವುದು ಗೊತ್ತೇ ಇಲ್ಲ. ಎಂದೋ ತಿಂದ ತಿಂಡಿಯನ್ನು ನೆನಪಿಸಿಕೊಳ್ಳುತ್ತಾ ನಮ್ಮ ಮುಂದೆ ತಟ್ಟೆಯಲ್ಲಿರುವ ತಿಂಡಿಯನ್ನು ದೂರುತ್ತಾ ಕೂರುತ್ತೇವೆ.

ಇತ್ತೀಚಿಗೆ ಆದ ವ್ಯವಹಾರದ ನಷ್ಟದ ಬಗ್ಗೆ ಚಿಂತೆ ಮಾಡುತ್ತ ಕುಳಿತುಬಿಡುತ್ತಾರೆ. ಎಂದೋ ಕೈಕೊಟ್ಟು ಹೋದ ಪ್ರೀತಿ-ಪ್ರೇಮದ ಬಗ್ಗೆ ತಲೆ ಕೆಡಿಸಿಕೊಂಡು ಅದರ ಗುಂಗಿನಲ್ಲಿ ಇಂದಿನ ನಗುವನ್ನು ಮರೆತು ಬಿಡುತ್ತಾರೆ. ಅಥವಾ ಇನ್ಯಾವತ್ತೋ ಬರಬಹುದೋ ಇಲ್ಲವೋ ಎನ್ನುವ ಗೊತ್ತಿಲ್ಲದ ಫಲಕ್ಕಾಗಿ ಎದುರು ನೋಡುತ್ತಿರುತ್ತೇವೆ. ನಾಳೆ ಹೊಸ ಮನೆ ಕಟ್ಟಿ ಆ ಮನೆಯಲ್ಲಿ ಸುಖವಾಗಿ ಮಲಗಬಹುದೆಂದು ಇಂದು ರಾತ್ರಿಯೆಲ್ಲಾ ಯೋಚಿಸುತ್ತೇವೆ. ಹೆಚ್ಚಾಗಿ ನಾವು ನೀವು ಎಲ್ಲರೂ ಹಿಂದಿನ ಇಲ್ಲವೇ ಮುಂದಿನ ಕ್ಷಣ, ದಿನ, ವಿದ್ಯಮಾನಗಳ ಬೆನ್ನು ಹತ್ತಿ ಕೂತು ಬಿಡುತ್ತೇವೆ. 'ಅಯ್ಯೋ ಹಾಗಾಯಿತು', 'ಅಯ್ಯೋ ಮುಂದೇನು ಕಾದಿದೆಯೋ!?' ಇವೇ ನಮ್ಮ ಮನಸ್ಸಿನ ನಿತ್ಯದ ನೋವುಗಳು. ಹಿಂದಿನದು, ಮುಂದಿನದು ಯೋಚಿಸುತ್ತಾ ಕಳೆವ ಇಂದಿನದು ಯಾತನೆಯ ಬಾಳು. ನೀವು ವರ್ತಮಾನದ ವಾಸ್ತವದಲ್ಲಿರದೆ ಮತ್ತೇ ಅದರ ಹಿಂದಿನ ಇಲ್ಲವೇ ಮುಂದಿನ ಸುತ್ತವೇ ಗಿರಕಿ ಹೊಡೆಯುತ್ತಿರುತ್ತೀರಿ. ಈ ವಿಷಯದಿಂದಾಗಿಯೇ ನಮಗೆ ನಮ್ ಲೈಫ್ ಬೋರ್ ಅನಿಸುವುದು.

ನಮಗೆ ವಾಸ್ತವದಲ್ಲಿ ಬದುಕುವುದು ಗೊತ್ತಿಲ್ಲ. ತಟ್ಟೆಯಲ್ಲಿರುವ ದೋಸೆಯ ಬಗೆಗೆ ಗಮನವಿರುವುದಿಲ್ಲ. ಹಿಂದೆ ಯಾವತ್ತೋ ಅದೇ ತಟ್ಟೆಯಲ್ಲಿ ತಿಂದ ರುಚಿಯಾದ ಇಷ್ಟದ ಪಲಾವ್‌ವನ್ನು ಜ್ಞಾಪಿಸಿಕೊಂಡು ಇಂದಿನ ರುಚಿಯಾದ ದೋಸೆಯನ್ನು ಸಪ್ಪೆ ಎಂದು ತೀರ್ಮಾನಕ್ಕೆ ಬರುತ್ತೇವೆ.

ಇದ್ದುದನ್ನು ಇರುವಂತೆ ಒಪ್ಪಿಕೊಳ್ಳುವುದು ವಾಸ್ತವತೆ ಅನಿಸಿಕೊಳ್ಳುತ್ತದೆ. ಅದೇ ಮನೋವಿಜ್ಞಾನ ಭಾಷೆಯಲ್ಲಿ ಅದನ್ನು ರಿಯಲಿಸ್ಟಿಕ್ ಥಿಂಕಿಂಗ್ ಅನ್ನುತ್ತಾರೆ. ಹಾಗಾದರೆ ಏನಿದು ವಾಸ್ತವ ಚಿಂತನೆ. ಒಂದು ಸಂದರ್ಭವನ್ನು ಎಲ್ಲಾ ನಿಟ್ಟಿನಲ್ಲಿ ಸರಿಯಾಗಿ ಗ್ರಹಿಸುವುದು. ಯಾವುದೋ ಹಿಂದಿನ ಅಸ್ಪಷ್ಟ ಅಥವಾ ಮುಂದಿನ ಬರೀ ಕಲ್ಪನೆಯ ಗ್ರಹಿಕೆಗೆ ಒಳಗಾಗದೆ ಆ ಕ್ಷಣದ ಸತ್ಯಕ್ಕೆ ನಿಲ್ಲುವುದು. ಅದು ಪಾಸೆಟಿವ್ ಆಗಿರಬಹುದು, ನೆಗೆಟಿವ್ ಆಗಿರಬಹುದು ಅಥವಾ ಇವೆರಡೂ ಅಲ್ಲದ ಸ್ವಾಭಾವಿಕ ಸಂದರ್ಭವೇ ಆಗಿರಬಹುದು. ಇಂತಹ ಸನ್ನಿವೇಶಗಳಲ್ಲಿ ವ್ಯಕ್ತಿಯು ತನ್ನಷ್ಟಕ್ಕೆ ತಾನು ಕಂಡುಕೊಳ್ಳುವುದು ಮತ್ತು ತನ್ಮೂಲಕ ಬೇರೆಯವರನ್ನು ಕೂಡ ಹಾಗೆಯೇ ಕಾಣುವುದಾಗಿದೆ ಮತ್ತು ಆ ಸಂದರ್ಭವನ್ನು ಗ್ರಹಿಸಿಕೊಳ್ಳುವುದಾಗಿದೆ .

ಉದಾಹರಣೆಗೆ ನಾಳೆ ನಿಮಗೊಂದು ಉದ್ಯೋಗದ ಸಂದರ್ಶನವಿದೆ ಎಂದು ಭಾವಿಸಿಕೊಳ್ಳಿ. ಸ್ವಾಭಾವಿಕವಾಗಿ ಎಲ್ಲರ ಮನಸ್ಸಿನಲ್ಲಿ ಒಂದು ರೀತಿಯ ಭಯ, ಕೀಳರಿಮೆ, ಸಿಗಲಾರದು ಎಂಬ ನಿರಾಶಾಭಾವ ಇಲ್ಲವೇ ನನಗಲ್ಲದೇ ಇನ್ಯಾರಿಗೆ ಸಿಗಲು ಸಾಧ್ಯವಿಲ್ಲವೆಂಬ ಅತಿಯಾದ ಆತ್ಮವಿಶ್ವಾಸವಿರಬಹುದು. ಆದರೆ ವಾಸ್ತವ ಚಿಂತನೆಯನ್ನು ನೀವು ಮೈಗೂಡಿಸಿಕೊಂಡಿದ್ದೆ ಆದಲ್ಲಿ ನಿಮ್ಮ ಮನಸ್ಸಿನಲ್ಲಿ ಬರುವ ಯೋಚನೆಗಳೇನು ಗೊತ್ತಾ? 'ನಾಳೆ ನನಗೆ ಸಂದರ್ಶನವನ್ನು ಯಶಸ್ವಿಯಾಗಿ ಸಫಲಗೊಳಿಸಲು ಆಗಲಿಲ್ಲವೆಂದರೆ ನಿಜಕ್ಕೂ ನಾನು ಆ ಹುದ್ದೆಗೆ ಯೋಗ್ಯನಲ್ಲದ ವ್ಯಕ್ತಿ. ಯೋಗ್ಯನಾಗಿದ್ದರೆ ಸಂದರ್ಶನ ಸಫಲಗೊಳ್ಳುತ್ತಿತ್ತು. ನನಗೆ ಕೆಲಸ ಸಿಗಲಿಲ್ಲವೆಂದ ಮಾತ್ರಕ್ಕೆ ಇನ್ನೆಂದು ನನಗೆ ಜೀವನದಲ್ಲಿ ಕೆಲಸವೇ ಸಿಗುವುದಿಲ್ಲ ಎಂದು ತೀರ್ಮಾನಿಸದೆ, ತನ್ನ ಕೆಲಸದ ಹುಡುಕುವಿಕೆಯನ್ನು ಮುಂದುವರೆಸುವುದು. ನನಗೆ ಸೂಕ್ತವಾದ ಕೆಲಸವಿದ್ದರೆ ಅದು ನನಗೆ ದೊರೆಯುತ್ತದೆ' ಎಂಬುದೇ ಆಗಿರುತ್ತದೆ.

ಈ ವಾಸ್ತವ ಚಿಂತನೆ ನಿಮ್ಮಲ್ಲಿನ ರಿಸ್ಕ್‌ಗಳನ್ನು ಬಹುತೇಕ ಇಲ್ಲವಾಗಿಸುತ್ತದೆ. ನಿಮಗೊಂದು ಪರಿಪೂರ್ಣತೆ ನೀಡುತ್ತದೆ. ಇದೊಂದು ಮಿತ್ರನಿದ್ದಂತೆ. ಸದಾ ನೀವು ಸಮಸ್ಯೆ ಅಂದುಕೊಂಡಾಗಲೆಲ್ಲಾ ನಿಮ್ಮ ಜೊತೆಗಾರನಾಗುತ್ತದೆ. ಇದು



ನೈಜತೆಯನ್ನು ನಿಮ್ಮ ಮುಂದಿಡುತ್ತದೆ. ಅದಕ್ಕೆ ತಕ್ಕಂತೆ ನಿಮ್ಮ ವರ್ತನೆಗಳು ನಿರ್ಧರಿತವಾಗುತ್ತವೆ. ಇದು ನಿಮಗೆ ನಿಜಕ್ಕೂ ಆತ್ಮೀಯ ಎನಿಸುವ ಭಾವ. ಆದರೆ ನೀವು ಅದನ್ನು ಒಗ್ಗಿಸಿಕೊಳ್ಳಬೇಕಷ್ಟೇ. ಇದಕ್ಕೆ ಸಾಕಷ್ಟು ಪ್ರಯತ್ನ ಅಗತ್ಯ. ಮನಸ್ಸನ್ನು ಆ ನಿಟ್ಟಿನಲ್ಲಿ ತರಬೇತಿಗೊಳಿಸಿ ಸಾಧ್ಯಮಾಡಿಕೊಳ್ಳಬೇಕು.

ಮಾನವನ ಮೆದುಳು ಅತ್ಯಂತ ಸಂಕೀರ್ಣವಾದದ್ದು. ಯಾವಾಗ ಹೇಗೆ ವರ್ತಿಸುತ್ತದೋ ಹೇಳುವುದು ಕಷ್ಟ! ಅದರ ವರ್ತನೆಗೆ ನರತಜ್ಞರೇ ಕೆಲವೊಮ್ಮೆ ಕೈಕಟ್ಟಿ ಕುಳಿತುಕೊಳ್ಳುತ್ತಾರೆ. ಕೇವಲ ಮನಸ್ಸನ್ನು ನಂಬಿ, ಮುಂದಿನ ದಿನಗಳನ್ನು ಖುಷಿಗೆ ಅಂತ ಎತ್ತಿಡಬಾರದು. ಕೆಲವರು ನಾಳಿನ ಬಗ್ಗೆ ಕನಸುಗಳಿರಬೇಕು, ಧನಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಳ್ಳಬೇಕು ಅಂತಾರೆ. ಆದರೆ ತಜ್ಞ ರಿಕ್ ಹ್ಯಾನ್‌ಸನ್ ಹೇಳುತ್ತಾನೆ, ನಾಳೆಯ ದಿನಗಳನ್ನು ಬರಿದೇ ಬರೀ ಕಲ್ಪನೆಯ ಮೇಲೆಯೇ ಬದುಕಲಾಗದು. ಯಾವತ್ತಿದ್ದರೂ ಒಂದು ಬದುಕಿನ ಖುಷಿ, ನಗು, ಅಳು ಎಲ್ಲವೂ ಇಂದಿನ ಸತ್ಯವನ್ನೇ ಆಧರಿಸುತ್ತವೆ. ವಾಸ್ತವವನ್ನೇ ಆಧರಿಸುತ್ತವೆ. ಹಿಂದಿನದು ಕಾಡುತ್ತಿದೆ ಎಂದರೆ ಅಂದಿನ ವಾಸ್ತವವನ್ನು ಬಳಸಿಕೊಳ್ಳಲು ಸೋತಿದ್ದರ ಪರಿಣಾಮವದು ಅಷ್ಟೇ! ನಾನೇನು ಅಂತ ಇಂದಿನ ಕ್ಷಣಗಳು ನಿರ್ಧರಿಸುತ್ತವೆ. ಇಂದಿನ ಒಳ್ಳೆಯದು ಮತ್ತು ಕೆಟ್ಟದ್ದು ಈ ಕ್ಷಣದ ಬದುಕಿಗೆ. ಅದನ್ನು ಅನುಭವಿಸಬೇಕು. ಅದನ್ನು ಒಪ್ಪಿಕೊಳ್ಳಬೇಕು. ಹೋಗಿರುವುದು ಸರಿಪಡಿಸಲಾಗದು. ಬರುವುದು ಹೀಗೆಯೇ ಇರುತ್ತದೆ ಎಂದು ನಿರ್ಧರಿಸಲಾಗದು. ಬರುವ ದಿನಗಳನ್ನು ನಂಬಿಯೇ ಇಂದಿನ ಕ್ಷಣಗಳನ್ನು ಬದಿಗಿಡಲಾಗದು. ಬರುವ ದಿನಗಳು ಹೇಗಿರುತ್ತವೋ ಯಾರಿಗೆ ಗೊತ್ತು!? ನಮ್ಮ ವಾಸ್ತವ ಇಂದಿನ ಎಲ್ಲಾ ಕಷ್ಟ ಸುಖ, ನಗು ಅಳುಗಳ ಒಟ್ಟು ಮೊತ್ತ. ಒಪ್ಪಿಕೊಳ್ಳಲೇಬೇಕು. ಬಲವಂತಕ್ಕೆ ಕಟ್ಟುಬೀಳದೇ ಇಷ್ಟದಲ್ಲೇ ಒಪ್ಪಿಕೊಳ್ಳುವ ಮನೋಭಾವ ಬೆಳೆಯಬೇಕು. ಅದಕ್ಕಾಗಿ ನೀವು ನಿಮ್ಮ ಮನಸ್ಸನ್ನು ಸಜ್ಜುಗೊಳಿಸಿಕೊಳ್ಳಬೇಕು. ವಾಸ್ತವವನ್ನು ಅರ್ಥಮಾಡಿಕೊಂಡರೆ ನಿಮ್ಮ ಮೇಲೆ ನಿಮಗೆ ಒಂದು ಸಂದರ್ಭವನ್ನು ಸರಿಯಾಗಿ ನಿಭಾಯಿಸುವ ಕಲೆ ಕರಗತಗೊಳ್ಳುತ್ತದೆ. ಒಂದು ಮಾತು, ಧನಾತ್ಮಕ ಚಿಂತನೆ ಹೇಗೋ ಹಾಗೆ ಋಣಾತ್ಮಕ ಚಿಂತನೆಯು ಕೂಡ. ಬರೀ ಚಿಂತನೆಯನ್ನು ನಂಬಿ ಬಾಳುವ ಬದುಕು ಮನಸ್ಸನ್ನು ಒತ್ತಡಕ್ಕೆ ಸಿಲುಕಿಸುತ್ತದೆ. ಜೀವನ ಪ್ರಾಕ್ಟಿಕಲ್, ಥಿಯರಿ ಅಲ್ಲ! ಹೀಗೆ ನಿಮ್ಮ ಬಾಳು ಹೇಗಿದೆ ಅದನ್ನು ಹಾಗೆ ಒಪ್ಪಿಕೊಳ್ಳಬೇಕು, ಅಪ್ಪಿಕೊಳ್ಳಬೇಕು. ಅದರೊಂದಿಗೆ ಒಂದಾಗಬೇಕು. ಈ ಕ್ಷಣಕ್ಕೆ ಅದಷ್ಟೇ ಸತ್ಯ. ನೀವು ಈ ಸ್ಥಿತಿಯನ್ನು ಒಪ್ಪಿಕೊಂಡ ಮೇಲೆ ಇನ್ನೇನೂ ಉಳಿದಿರುವುದಿಲ್ಲ. ಎಲ್ಲವೂ ಖಾಲಿ. ತುಂಬಿದಂತೆ ಮನಸ್ಸು ನಿರಾಳ. ಯಾವುದೇ ಚಿಂತನೆ ಇಲ್ಲ, ಚಿಂತೆಯೂ ಇಲ್ಲ. ಪ್ರತಿದಿನವೂ ಹೀಗೆ ಸಾಗಿದರೆ. ಜೀವನ ಸುಖಮಯ ಅನಿಸೋದು.

IF EVERY DAY CAN BE A FRESH START, THEN LIFE IS BEAUTIFUL.



ನರೇಂದ್ರ ಕಬ್ಬಿನಾಲೆ
ಮುದ್ರಾಡಿ
ಉಡುಪಿ

# ಮತದಾನ

ಹುಬ್ಬೇರಿಸಿದೆ ಗರಿಗೆದರಿ ಮತಪ್ರಚಾರವೂ ಹತ-ಹತಾಶೆ, ಗತವೈಭವ, ಹುಸಿ
ಪ್ರಣಾಳಿಕೆಯ ಮತಯಾಚನೆಯು;
ಸೋಗು, ಬರಿಮಾತಿನ, ಬಿರುಸು ಮಾತಿನ ಸುಳ್ಳ ಮಾತ ಸುರಿಮಳೆಯ ನುಸುಳ
ವೈಖರಿಯ ಪೈಪೋಟಿಯು;
ಬರಬರುತಾ ಸಾಚಾ ಸಭ್ಯತೆಯ ಮೆಟ್ಟಿನಿಂತಿದೆ ದೌರ್ಜನ್ಯ ಮನೋಗತಿಯು;

ಅಬ್ಬರಕೆ ಎಣೆಯೇ ಇಲ್ಲವೋ?
ದೊಂಬರಾಟಕ್ಕೆ ಕೊನೆಯೇ ಇಲ್ಲವೋ?
ಅತ್ತು-ಕರೆದು, ಮುತ್ತು ಬಗೆಯ ವಾಗ್ವರಿಯ ಉಲಿತವೂ;

ಎಲ್ಲವೂ ನಿಷ್ಠೆಯಿಲ್ಲದ, ಮಂಕುಬೂದಿ ಎರಚುವ ಪರಿಯು;
ಒಂದಿನಿತು ಶಿಷ್ಟಾಚಾರ ಇಲ್ಲದ, ಬದ್ಧತೆಯ ಸುಳಿವ ಗುರುತೇ ಇಲ್ಲದ;
ಮುಗ್ಧ ಜನತೆಯ ಅಸಹಾಯಕ ಸ್ಥಿತಿಯನ್ನೇ ದುರ್ಬಳಕೆ ಮಾಡುವ;
ವ್ಯಥೆ-ಕಥೆಗಳಿವು!

ಬರೇ ಬುರುಡೆ ಈ ಮತದಾನ, ಬರೇ ಬುರುಡೇ ದೇಶರಕ್ಷಣೆಯ ಬೂಟಾಟಿಕೆ.
ವಂಚನೆ, ಕಳ್ಳ, ದಗ, ಖದೀಮರ ಮಟ್ಟಹಾಕಲರಿಯದ ಬೆಪ್ಪ ನೇತಾರರ
ದೌರ್ಬಲ್ಯಗತಿಯ ಮೀನ-ಮೇಷ ಕಾಲಹರಣವಿದು!

ಸರ್ವಜನ ಹಿತವು ಉದಿಪುದದು ನಿಜ, ಹೃದಯಾಂತರಾಳದಲ್ಲಿ
ಅಂತರ್ಗತವಾಗಿರಬೇಕು, ಸಮಾನಾಂತರದಲ್ಲಿ ಸರ್ವಕಾಲಕ್ಕೂ ವಿಹಿತವಿರಬೇಕು.

ಮತದಾನಕ್ಕೆ ಸನ್ನಿಹಿತವಾಗುವ ದಿನಗಳಲ್ಲಿ ದೇಶಪ್ರಜ್ಞೆ! ಪ್ರಜಾಹಿತ!
ಇಲ್ಲಿ ಪಡಿಮೂಡುತಲಿರುವುದು ಯೋಚನಾಲಹರಿಯಲ್ಲಿ.
ಇದಕ್ಕಿಂತ ಇನ್ನೊಂದಿಲ್ಲ ಅಣಕ ಪ್ರಜಾಪ್ರಭುತ್ವ!

ಪ್ರಜ್ಞಾಹೀನ ನೇತಾರನ ಖಚಿತ ಸತ್ಯಾಸತ್ಯತೆಯ ನಿಕಷವಿದು,
ಇದುವೇ ತಿಳಿಯಿರಣ್ಣಾ! ಮತದಾರ ಬಂಧುವೇ!

ಪ್ರಕಟ ಮತಪಟ್ಟಿಯಲ್ಲಿ ಕಳೆ ಮೂಡುತಿದೆ ಪುಟತುಂಬಿ ಪೇರಿಸಿದ ಅಭ್ಯರ್ಥಿಗಳ
ಸಾಲು-ಸಾಲು, ತಡಕಾಡುತಿರುವೆ ನಾನು ಮತದಾರ ಆ ಅಭ್ಯರ್ಥಿಗಳ ಮಧ್ಯೆ.
ವಿಧಿಯೇ ಇಲ್ಲ ಎನಗೆ! ಯೋಚಿಸಿ, 'ಕಾಲ'ಕ್ಕೆ ಅದುಮುವೆ ಎಳೆನಿಂತ
ಜೀವಕಳೆಯ ಬೆರಳತುದಿಯಲ್ಲಿ.

ಮತದಾರ, ನಿನಗಿಲ್ಲವೋ ತನ್ನ ಅಂತರ್ಯದ
ಅಭ್ಯರ್ಥಿಯ ಆಯ್ಕೆಯ ಸೂಚ್ಯ ಗುರುತು!!
ಮತದಾರ, ನಿನಗಿಲ್ಲವೋ ಆದರ್ಶ ತನ್ನ ಅಂತರ್ಯದ
ಅಭ್ಯರ್ಥಿಯ ಆಯ್ಕೆಯ ಅಚ್ಚು ಗುರುತು!!



ದೊಂಬಯ್ಯ ಶೆಟ್ಟಿಗಾರ್
ಶೇಷಾದ್ರಿಪುರಂ,
ಬೆಂಗಳೂರು

........







ತುಳು ಲಿಪಿಯ ಕೀಲಿಮಣೆಯನ್ನು ಡೌನ್-ಲೋಡ್ ಮಾಡಲು
jaitulunad.com ವೆಬ್-ಸೈಟ್ ಗೆ ಭೇಟಿಮಾಡಿ.



ಎನ್. ನಟರಾಜ್
ಬಸವನಗುಡಿ,
ಬೆಂಗಳೂರು




Photo Credit: Yashaswi J



Photo Credit: Yashaswi J



Photo Credit: Yashaswi J

# ನೀವು ಯಾರು?

ಕೊರೊನ ಎಲ್ಲರನ್ನು ಗೃಹಬಂಧನದಲ್ಲಿರಿಸಿದ್ದ ಸಮಯ. ಕೆಲ ತಿಂಗಳು ಮನೆಯಲ್ಲಿಯೇ ಇದ್ದು ಬೋರ್ ಆಗಿ ಒಂದು ಶನಿವಾರ ಕ್ಯಾಮರ ಹಿಡಿದು ಹೊರಗೆ ಹೋಗಿ ಬರುತ್ತೇನೆಂದು ಹೇಳಿದೆ. ಬೆಳಗ್ಗೆ 7 ಗಂಟೆಗೆ ನಾಗಮಂಗಲ ಕಡೆ ಗೂಗಲ್ ಮ್ಯಾಪ್ ಹಾಕಿ ಹೊರಟೆ. ಮಂಡ್ಯ ಜಿಲ್ಲೆಯಲ್ಲಿರುವ ಸಣ್ಣ ತಾಲೂಕು. ಬೆಂಗಳೂರಿಂದ ಮಂಗಳೂರಿಗೆ ಹೋಗುವ ಹೆದ್ದಾರಿಯಲ್ಲಿ ನೆಲ್ಲಿಗೆರೆ ಸರ್ಕಲ್ ಸಿಗುತ್ತದೆ. ಅಲ್ಲಿಂದ ಎಡಕ್ಕೆ ತಿರುಗಿ ಸುಮಾರು 15 ಕಿ.ಮಿ ದೂರ ಹೋದರೆ ನಾಗಮಂಗಲ ಎಂಬ ಜನನಿಬಿಡ ಪ್ರದೇಶಕ್ಕೆ ತಲುಪುತ್ತೇವೆ. ಇದೇ ರಸ್ತೆಯಲ್ಲಿ ಸ್ವಲ್ಪ ಮುಂದೆ ಹೋಗಿ ಬಲಕ್ಕೆ ತಿರುಗಿದರೆ ರಥಬೀದಿಯಲ್ಲಿರುತ್ತೀರಿ. ಸುಮಾರು 200ಮಿ ದೂರದಲ್ಲಿ ಸುಂದರವಾದ ಸೌಮ್ಯಕೇಶವ ಸ್ವಾಮಿ ದೇವಾಲಯದ ಗೋಪುರ ಹಾಗೂ ಸ್ತಂಭ ಕಾಣಿಸಿತು.

ಹೊಯ್ಸಳರ ಆಳ್ವಿಕೆಯಲ್ಲಿ ಕಟ್ಟಿಸಿದ ಈ ದೇವಾಲಯವು ೧೨ನೇ ಶತಮಾನದ್ದು. ಇಲ್ಲಿಗೆ ಭೇಟಿ ನೀಡುವ ಮುಂಚೆ, ನಾಗಮಂಗಲ ಹಾಗೂ ಈ ದೇವಾಲಯದ ಬಗ್ಗೆ ನನಗೆ ಅಷ್ಟೇನು ವಿಷಯ ತಿಳಿದಿರಲಿಲ್ಲ. ದೇವಾಲಯದ ಮುಖ್ಯದ್ವಾರದಲ್ಲಿ ಭಾರತೀಯ ಪುರಾತತ್ವ ಇಲಾಖೆಯು ದೇವಸ್ಥಾನದ ಇತಿಹಾಸದ ಬಗ್ಗೆ ಹಾಕಿದ್ದ ಫಲಕವನ್ನು ಓದಿ ದೇವಸ್ಥಾನದ ಬಗ್ಗೆ ತಿಳಿದುಕೊಂಡೆ. ಮುಖ್ಯ ದ್ವಾರದಿಂದ ಒಳಗೆ ಹೋದರೆ ಮಹಾಮಂಟಪದಲ್ಲಿ 15-20 ಅಡಿ ಎತ್ತರದ ಕಂಬಗಳು ಆಕರ್ಷಕವಾಗಿ ಕಂಡಿತು. ಹೊರಗೆ ಬಿಸಿಲಿದ್ದರೂ ಒಳಗೆ ಮಂದ ಬೆಳಕಿನಲ್ಲಿ ಈ ಗಜಗಾತ್ರದ ಕಂಬಗಳ ಇತಿಹಾಸವನ್ನು ನೋಡಿದ ಕೂಡಲೆ ಹೇಳಬಹುದು, ಇದು ಹೊಯ್ಸಳರ ಕಾಲದ್ದು ಎಂದು. ದೇವರಿಗೆ ಕೈಮುಗಿದು ಎಡಕ್ಕೆ ನಡೆದರೆ ಹೊಯ್ಸಳರ ತಲಕಾಡು


Photo Credit: Yashaswi J


Photo Credit: Yashaswi J


Mohammad Khaleemulla
Photo credit: Deccan Herald

ಸೊಮನಾಥಪುರ, ಬೇಲೂರು, ಹಳೆಬೀಡಿನಂತಹ ಶೈಲಿಯ ಹಾಗೇ ನಕ್ಷತ್ರದ ಆಕಾರದಲ್ಲಿ ತಳಭಾಗವಿರುವುದಾಗಿ ಭಾಸವಾಗುತ್ತದೆ.

ಕೊರೊನದ ಭೀತಿಯಿಂದ ಬಹಳ ಕಡಿಮೆ ಜನ ಇದ್ದುದರಿಂದ ನನಗೆ ಬೇಕಾದ ಹಾಗೆ ಕ್ಯಾಮರದಲ್ಲಿ ಈ ದೇವಾಲಯದ ಸೌಂದರ್ಯವನ್ನು ಸೆರೆಹಿಡಿದು ಹೊರಗೆ ಬಂದೆ. ಹೊರಗೆ ಬಂದಾಗ ಎದುರಿಗೆ ೪-೫ ಜನ, ಸುಮಾರು 60-80ವಯಸ್ಸಿನ ವೃದ್ಧರು ಮಾತಾಡುತ್ತಿದ್ದರು. ಇವರಲ್ಲಿ ಒಬ್ಬರು ಕರೆದು ಈ ಊರು ಹಾಗೂ ದೇವಸ್ಥಾನದ ಬಗ್ಗೆ ತುಂಬಾ ಇತಿಹಾಸವಿದೆ ಎಂದು ಹೇಳಲು ಪ್ರಾರಂಭಿಸಿದರು. ಈ ಊರಿನಲ್ಲಿ ಸುಮಾರು 185 ಶಿಲಾಶಾಸನಗಳಿವೆ ಎಂದು ಹೇಳಿದಾಗ ಆಶ್ಚರ್ಯವಾದರೂ ನಾನು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೆ. ಇವರು ಹೇಳಿ ಮುಗಿಸಿದ ಮೇಲೆ ಇವರ ಬಗ್ಗೆ ತಿಳಿದುಕೊಳ್ಳೋಣ ವೆಂದು "ನೀವು ಯಾರು ಹಾಗೂ ನಿಮಗೆ ಈ ಊರಿನ ಬಗ್ಗೆ ಹೇಗೆ ಇಷ್ಟೆಲ್ಲಾ ವಿಷಯ ತಿಳಿದಿದೆ" ಎಂದು ಕೇಳಿದೆ. ಆಗ ಇವರ ಜೊತೆಗಿದ್ದವರು "ಇವರ ಹೆಸರು ಮೊಹಮ್ಮದ್ ಖಲೀಮುಲ್ಲಾ. ಇವರು ಈ ಊರಿನವರೇ ಹಾಗೂ ಶಾಲಾ ಶಿಕ್ಷಕರಾಗಿದ್ದವರು. ಈ ಊರಿನ ಪುರಾತನ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಲು ಶ್ರಮಿಸಿದ ವ್ಯಕ್ತಿ. ಈ ಊರಿನ ಬಗ್ಗೆ ಮತ್ತು ಇಲ್ಲಿನ ಎಲ್ಲಾ ಐತಿಹಾಸಿಕ ಶಿಲಾನ್ಯಾಸಗಳ ಬಗ್ಗೆ ತಿಳಿದುಕೊಂಡಿರುವವರು ಇವರೊಬ್ಬರೆ. ಇವರ ಬಗ್ಗೆ ನಮಗೆ ಅತ್ಯಂತ ಹೆಮ್ಮೆ ಇದೆ" ಎಂದರು. ಇವರ ಬಗ್ಗೆ ತಿಳಿದು ಕೊಳ್ಳಲು ಕುತೂಹಲವಂತು ಹುಟ್ಟಿತು. ಅಲ್ಲಿಯೇ ಕೆಲ ಕಾಲ ಇದ್ದು ಮರಳಿ ಬೆಂಗಳೂರಿಗೆ ಸಂಜೆಯಾಗುವಷ್ಟರಲ್ಲಿ ತಲುಪಿದೆ.

ಸೆರೆ ಹಿಡಿದ ಎಲ್ಲಾ ಚಿತ್ರಗಳನ್ನು ಪ್ರೊಸೆಸ್ ಮಾಡುವಾಗ ಮತ್ತೆ ಖಲೀಮುಲ್ಲಾ ನೆನಪಾದರು. ಇವರ ಬಗ್ಗೆ ತಿಳಿದು ಕೊಳ್ಳಲು ಅಂತರ್ಜಾಲದಲ್ಲಿ ಪ್ರಯತ್ನಿಸಿದೆ. ಅಷ್ಟೇನು ಮಾಹಿತಿ ಸಿಗದೆ ಸುಮ್ಮನಾದೆ. ಕೆಲವು ತಿಂಗಳ ನಂತರ 2022ರಲ್ಲಿ ಇವರನ್ನು ಡೆಕ್ಕನ್ ಹೆರಾಲ್ಡ್ Changemakers 22 – Preserving History in Mandya's Backyard ಎಂಬ ಕಾರ್ಯಕ್ರಮದಲ್ಲಿ ನೋಡಿದೆ. ಇವರ ಸಾಧನೆ ಬಹಳ ದೊಡ್ಡದೇ ಇದೆ ಎಂದು ತಿಳಿದು ಹೆಮ್ಮೆ ಎನಿಸಿತು.

ಬಿಡುವಿನ ಸಮಯದಲ್ಲಿ ಈ ಊರಿಗೆ ಮತ್ತು ಶ್ರೀ ಸೌಮ್ಯಕೇಶವ ದೇವಸ್ಥಾನಕ್ಕೆ ಭೇಟಿ ನೀಡಿ ಹಾಗೂ ಖಲಿಮುಲ್ಲ ಅವರ ಬಗ್ಗೆ ತಿಳಿದುಕೊಳ್ಳುವುದನ್ನು ಮರೆಯಬೇಡಿ.



ಯಶಸ್ವಿ ಜೆ
ಜ್ಞಾನಭಾರತಿ
ಬೆಂಗಳೂರು

*ಖಲೀಮುಲ್ಲಾ ಅವರ ಬಗ್ಗೆ ತಿಳಿಯಲು ಈ ವೆಬ್-ಸೈಟ್ ಗೆ ಭೇಟಿ ನೀಡಬಹುದು*
*https://22in22.deccanherald.com/mohammed-kaleemulla*

*https://www.deccanherald.com/india/karnataka/bengaluru/institute-makes-history-by-preserving-ktaka-itihasa-779522.html*

# ಶೆಟ್ಟಿಗಾರ ವಾಣಿ

- ಸಮಾಜದಲ್ಲಿರುವ ಸಾಹಿತ್ಯ ರಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿ ಶೆಟ್ಟಿಗಾರ ವಾಣಿ ತನ್ನ ಪ್ರಕಟಣೆಯನ್ನು ಪ್ರಾರಂಭಿಸಿದೆ.
- ಕೂಟದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ಬರೆದಿರುವ (ಅಪ್ರಕಟಿತ) ಕಥೆ, ಕವನ, ಪ್ರಬಂಧ, ಪ್ರವಾಸ ಕಥನ, ವೈಚಾರಿಕ ಲೇಖನ ಮೊದಲಾದ ವಿಭಿನ್ನ ಸಾಹಿತ್ಯ ಕೃತಿಗಳನ್ನು ಸ್ವೀಕರಿಸಲಾಗುವುದು.
- ಆಯ್ಕೆಯಾದ ಬರಹಗಳನ್ನು ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.
- ಬರಹಗಳ ಆಯ್ಕೆ ಮತ್ತು ಪ್ರಕಟಣೆಯ ವಿಷಯದಲ್ಲಿ ಪತ್ರಿಕೆಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಲೇಖಕರು ತಮ್ಮ ಹೆಸರು, ವಿಳಾಸ, ಭಾವಚಿತ್ರ ಮತ್ತು ಕಿರು ಪರಿಚಯವನ್ನು ಲೇಖನದೊಂದಿಗೆ ನಮೂದಿಸಬೇಕು.
- ಪತ್ರಿಕೆಯ ಸರ್ವಾಂಗೀಣ ಪ್ರಗತಿಗೆ ಸಲಹೆ ಸೂಚನೆಗಳನ್ನು ಸಾದರದಿಂದ ಸ್ವೀಕರಿಸಲಾಗುವುದು.

ಆಸಕ್ತರು ತಮ್ಮ ಬರಹಗಳನ್ನು (WORD FILE) ಇಮೇಲ್ ಮೂಲಕ ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿಸಲಾಗಿದೆ (ಹೆಚ್ಚಿನ ಮಾಹಿತಿ, ವಿವರ ಮತ್ತು ನಿಮ್ಮ ಅನಿಸಿಕೆಗಳಿಗೆ ಸಂಪರ್ಕಿಸಿ):

**shettigaravani@gmail.com**

ಪತ್ರಿಕೆಯ ಓದುಗರು ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಕೆಳಕಂಡ ಇಮೇಲ್ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿಕೆ:

**shettigaravani@gmail.com**
**Mob. No. 9845660131**

# ದಕ್ಷಿಣ ಕನ್ನಡ ಪದ್ಮಶಾಲಿ ಸಮಾಜ ಸೇವಾ ಕೂಟ®, ಬೆಂಗಳೂರು

Estd. 1989

**D.K. PADMASHALI SAMAJA SEVA KOOTA, BENGALURU**

**28-ಜುಲೈ-2024**
ಭಾನುವಾರ

ಯು.ಸಿ.ಪಿ.ಇ ಕ್ರೀಡಾಂಗಣ
ಬೆಂಗಳೂರು ವಿಶ್ವವಿದ್ಯಾಲಯ

8AM - 6PM

# 2024 ವಾರ್ಷಿಕ ಕ್ರೀಡಾ ಕೂಟ



| | | |
|---|---|---|
| 1 | ಯು.ಕೆಜಿ ವರೆಗಿನ ಮಕ್ಕಳು | ಡ್ರಾಯಿಂಗ್/ಪೈಂಟಿಂಗ್ ಮತ್ತು ಇತರೆ ಆಕರ್ಷಕ ಆಟಗಳು |
| 2 | 1ನೇ - 4ನೇ ತರಗತಿ | |
| 3 | 5ನೇ - 7ನೇ ತರಗತಿ | ಓಟ (100mts) ಡ್ರಾಯಿಂಗ್/ಪೈಂಟಿಂಗ್ ಮತ್ತು ಇತರೆ ಆಕರ್ಷಕ ಆಟಗಳು |
| 4 | 8ನೇ - 10ನೇ ತರಗತಿ | |
| 5 | ಪಿ.ಯು.ಸಿ - 25 ವರ್ಷದೊಳಗಿನವರಿಗೆ | |
| 6 | 26ರಿಂದ 35 ವರ್ಷದೊಳಗಿನವರಿಗೆ | ಓಟ (100mts) ಗುಂಡು ಎಸೆತ ಮತ್ತು ಇತರೆ ಆಕರ್ಷಕ ಆಟಗಳು |
| 7 | 36ರಿಂದ 50 ವರ್ಷದೊಳಗಿನವರಿಗೆ | |
| 8 | 50 ವರ್ಷ ಮೇಲ್ಪಟ್ಟವರಿಗೆ | ಕನ್ನಡ ರಸಪ್ರಶ್ನೆ, ಮತ್ತು ಇತರೆ ಆಕರ್ಷಕ ಆಟಗಳು |
| 9 | ಎಲ್ಲಾ ವಯೋಮಾನದ ಮಹಿಳೆಯರಿಗೆ | Throwball ಮತ್ತು 4x100mts ರಿಲೇ |
| 10 | ಎಲ್ಲಾ ವಯೋಮಾನದ ಪುರುಷರಿಗೆ | ಕ್ರಿಕೆಟ್ (Cricket) ಮತ್ತು 4x100mts ರಿಲೇ |
| 11 | ಹಿರಿಯ ವಿಭಾಗ (ಪಿ.ಯು.ಸಿ - 50 ವರ್ಷದೊಳಗಿನವರಿಗೆ)<br>ಕಿರಿಯ ವಿಭಾಗ (10ನೇ ತರಗತಿ ಒಳಗಿನವರಿಗೆ) | ರಸ ಪ್ರಶ್ನೆ |

**ಕ್ರಿಕೆಟ್**
(ಪುರುಷರಿಗೆ)
ಬೆಳಿಗ್ಗೆ 8 ಗಂಟೆಗೆ
ಪ್ರಾರಂಭ

**Throwball**
(ಮಹಿಳೆಯರಿಗೆ)
ಬೆಳಿಗ್ಗೆ 9 ಗಂಟೆಗೆ
ಪ್ರಾರಂಭ

**4x100**
**ರಿಲೇ ಓಟ**

ವಿಶೇಷ ಆಕರ್ಷಣೆ
**ಆದರ್ಶ ದಂಪತಿ ಸ್ಪರ್ಧೆಗಳು**

**ನಿಬಂಧನೆಗಳು:**
- ಸ್ವಸಮಾಜದವರು ಮತ್ತು ಕೂಟದಲ್ಲಿ ಸದಸ್ಯರಾಗಿ ನೊಂದಾಯಿಸಿದವರು ಮಾತ್ರ ಭಾಗವಹಿಸಲು ಅವಕಾಶ
- ಅಂಪೈರ್ ರವರ ತೀರ್ಪು ಅಂತಿಮ. ಪ್ರಶ್ನಿಸುವಂತಿಲ್ಲ
- ಪೈಂಟಿಂಗ್ ಗೆ ಹಾಳೆಯನ್ನು ಮಾತ್ರ ಒದಗಿಸಲಾಗುವುದು

**ಬಸ್ ಮಾರ್ಗ**
ಕೆ.ಆರ್.ಮಾರ್ಕೆಟ್, ಶಿವಾಜಿನಗರ, ಮೆಜೆಸ್ಟಿಕ್ ನಿಂದ ಉಲ್ಲಾಳ ಉಪನಗರದ ಕಡೆಗೆ ಹೋಗುವ ಬಸ್ಸಿನಲ್ಲಿ
ಬೆಂಗಳೂರು ವಿಶ್ವವಿದ್ಯಾಲಯದ ಮಹಿಳೆಯರ ಹಾಸ್ಟೆಲ್ ಸ್ಟಾಪ್

**ಮೆಟ್ರೋ ಮಾರ್ಗ**
ನೇರಳೆ ಮಾರ್ಗ - ಜ್ಞಾನ ಭಾರತಿ ಸ್ಟಾಪ್

**ಕ್ರೀಡಾಕೂಟದ ವ್ಯವಸ್ಥಾಪಕರು**
ಚೇತನ್ ಡಿ- 94480 90283

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಕೃಷ್ಣ ಶೆಟ್ಟಿಗಾರ್ - 98863 80271
ದೀಪಕ್ ರಾಜ್ - 89281 99473
ಯಶಸ್ವಿ ಜಿ - 90089 00488
ಸತ್ಯಪ್ರಕಾಶ್ ಜಿ - 99647 06967
ವಿಶ್ರಾಂತ್ ಬಿ.ಎಲ್ - 99642 37094

**ಸೂಚನೆ:**
ಮಧ್ಯಾಹ್ನದ ಊಟದ ವ್ಯವಸ್ಥೆ ಏರ್ಪಡಿಸಲಾಗಿದೆ.
ಧನಸಹಾಯ (ಪ್ರಾಯೋಜಕತ್ವ/ sponsor) ಮಾಡಲಿಚ್ಛಿಸುವವರು ಕೂಟದ ಕಾರ್ಯಕಾರಿ ಸಮಿತಿಯವರಿಗೆ ತಿಳಿಸಬೇಕಾಗಿ ಕೋರುತ್ತೇವೆ.